ಸಂಪುಟ 01 । ಸಂಚಿಕೆ 187 ಸೋಮವಾರ 26 ಅಕ್ಟೋಬರ್ 2026 । ಪುಟ 4 । ಬೆಲೆ-2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) **ಮಹರ್ಷಿ ವಾಲ್ಮೀಕಿ ಜಯಂತಿ:** ಸಂಸ್ಕೃತದ ಆದಿಕವಿ ಮಹರ್ಷಿ ವಾಲ್ಮೀಕಿಯವರ ಜನ್ಮದಿನವನ್ನು ಈ ದಿನ ಆಚ-ರಿಸಲಾಗುತ್ತದೆ.

2) **ಶೀಗಿ ಹುಣ್ಣಿಮೆ / ಶರದ್ ಪೂರ್ಣಿಮಾ:** ಆಶ್ವಯುಜ ಮಾಸದ ಹುಣ್ಣಿಮೆ ತಿಥಿ. ಈ ದಿನ ಲಕ್ಷ್ಮಿ ದೇವಿ, ಚಂದ್ರ ದೇವ ಮತ್ತು ಕೃಷ್ಣನನ್ನು ಪೂಜಿಸಲಾಗುತ್ತದೆ.

3) **ಪಂಚಾಂಗ ವಿಶೇಷ:** ಪರಾಭವ ನಾಮ ಸಂವತ್ಸರ, ಆಶ್ವಯುಜ ಶುಕ್ಲ ಹುಣ್ಣಿಮೆ.

ಸುಭಾಷಿತ

ಸೋಮಾರಿಯಾದವನು ತನ್ನ ಹಿತವನ್ನು ನೋಡಿಕೊಳ್ಳಲಾರ; ಇತರರಿಗೂ ಸಹಾಯ ಮಾಡಲಾರ.

–ಗೌತಮ ಬುದ್ಧ

ಮೆಕ್ಕಾದಲ್ಲಿ ಅತಂತ್ರರಾದ ಕನ್ನಡಿಗರ ನೆರವಿಗೆ ಧಾವಿಸಿದ ಯು.ಟಿ. ಖಾದರ್; ಅ.27ರ ಗಡುವು,

600ರಿಂದ 800ಕ್ಕೂ ಹೆಚ್ಚು ಉಮ್ರಾ ಯಾತ್ರಿಕರ ಸುರಕ್ಷಿತ ವಾಪಸಾತಿಗೆ ಆಗ್ರಹ । ವಿಮಾನಯಾನ ಕಂಪನಿಗಳಿಗೆ ಸಚಿವರ ಖಡಕ್ ಎಚ್ಚರಿಕೆ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಪವಿತ್ರ ಉಮ್ರಾ ಯಾತ್ರೆಗಾಗಿ ಸೌದಿ ಅರೇಬಿಯಾದ ಮೆಕ್ಕಾಗೆ ತೆರಳಿರುವ ಕರ್ನಾಟಕದ ನೂರಾರು ಯಾತ್ರಿಕರು ವಿಮಾನಯಾನ ಸೇವೆಯಲ್ಲಿನ ವ್ಯತ್ಯಯದಿಂದಾಗಿ ತಾಯ್ನಾಡಿಗೆ ಮರಳಲು ಪರದಾಡುತ್ತಿರುವ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರ ಅವರ ನೆರವಿಗೆ ಮುಂದಾಗಿದೆ. ಅಕ್ಟೋಬರ್ 27ರೊಳಗೆ ಯಾತ್ರಿಕರನ್ನು ಸುರಕ್ಷಿತವಾಗಿ ಕರ್ನಾಟಕಕ್ಕೆ ಕರೆತರಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ವಿಮಾನಯಾನ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮಕ್ಕಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗಲಾಗುವುದು ಎಂದು ಸಚಿವ ಯು.ಟಿ. ಖಾದರ್ ಎಚ್ಚರಿಕೆ ನೀಡಿದ್ದಾರೆ.ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಭದ್ರತಾ ಪರಿಸ್ಥಿತಿಯ ಪರಿಣಾಮವಾಗಿ ವಿಮಾನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದ್ದು, ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಉಮ್ರಾ ಯಾತ್ರೆಗೆ ತೆರಳಿರುವ ಸುಮಾರು 600ರಿಂದ 800ಕ್ಕೂ ಹೆಚ್ಚು ಮಂದಿ



ಸೌದಿ ಅರೇಬಿಯಾದಲ್ಲಿ ಸಿಲುಕಿಕೊಂಡಿದ್ದಾರೆ ಎಂದು ವರದಿಯಾಗಿದೆ. ಯಾತ್ರಿಕರ ವಾಪಸಾತಿ ವಿಳಂಬವಾಗುತ್ತಿರುವುದರಿಂದ ಅವರ ಕುಟುಂಬಸ್ಥರಲ್ಲಿ ಆತಂಕ ಮನೆಮಾಡಿದೆ. ಟಿಕೆಟ್ ಹಣ ಪಡೆದಿರುವ ಸಂಸ್ಥೆಗಳೇ ಹೊಣೆಚಿಕ್ಕಮಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವ ಯು.ಟಿ. ಖಾದರ್, ಯಾತ್ರಿಕರು ತಮ್ಮ ವಾಪಸಾತಿ ಪ್ರಯಾಣಕ್ಕೂ ಮುಂಗಡವಾಗಿ ಟಿಕೆಟ್ ಹಣ ಪಾವತಿಸಿದ್ದಾರೆ. ಆದ್ದರಿಂದ ಅವರನ್ನು ಸುರಕ್ಷಿತವಾಗಿ ಮರಳಿ ಕರೆತರುವ ಜವಾಬ್ದಾರಿಯಿಂದ ವಿಮಾನಯಾನ ಸಂಸ್ಥೆಗಳು ಹಿಂದೆ ಸರಿಯಬಾರದು ಎಂದು ಸ್ಪಷ್ಟಪಡಿಸಿದ್ದಾರೆ.ಇಂಡಿಗೋ, ಆಕಾಶ ಏರ್ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಸೇರಿದಂತೆ ಸಂಬಂಧಪಟ್ಟ ವಿಮಾನಯಾನ ಸಂಸ್ಥೆಗಳು ಯಾತ್ರಿಕರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಪ್ರಯಾಣಿಕರನ್ನು ತಮ್ಮ ಗಮ್ಯಸ್ಥಾನಕ್ಕೆ ಕರೆದೊಯ್ದ ಸಂಸ್ಥೆಗಳು, ವಾಪಸಾತಿಯಲ್ಲಿಯೂ ತಮ್ಮ ಹೊಣೆಗಾ-ರಿಕೆಯನ್ನು ನಿರ್ವಹಿಸಬೇಕು ಎಂಬುದು ಸಚಿವರ ಆಗ್ರಹವಾಗಿದೆ.ಅಕ್ಟೋಬರ್ 27ರೊಳಗೆ ಕ್ರಮಕ್ಕೆ ಸೂಚನೆಸಿಲುಕಿರುವ ಯಾತ್ರಿಕರನ್ನು ವಾಪಸ್ ಕರೆತರಲು ಅಕ್ಟೋಬರ್ 27ರವರೆಗೆ ಗಡುವು ನೀಡಲಾಗಿದೆ. ಈ ಅವಧಿಯೊಳಗೆ ಸೂಕ್ತ ವ್ಯವಸ್ಥೆ ಮಾಡದಿದ್ದರೆ ಹಜ್ ಸಮಿತಿಯ ಮೂಲಕ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವುದಾಗಿ ಸಚಿವರು ಎಚ್ಚರಿಸಿದ್ದಾರೆ.ಯಾತ್ರಿಕರು ಈಗಾಗಲೇ ಪ್ರಯಾಣಕ್ಕಾಗಿ ಹಣ ವೆಚ್ಚ ಮಾಡಿದ್ದು, ವಿದೇಶದಲ್ಲಿ ಅನಿರೀಕ್ಷಿತ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅವರ ಸುರಕ್ಷತೆ, ವಸತಿ ಮತ್ತು ತಾಯ್ನಾಡಿಗೆ ಮರಳುವ ವ್ಯವಸ್ಥೆ ಕಲ್ಪಿಸುವುದು ಸಂಬಂಧಪಟ್ಟ ಸಂಸ್ಥೆಗಳ ಆದ್ಯತೆಯಾಗಬೇಕು ಎಂಬ ಒತ್ತಾಯ ಕೇಳಿಬಂದಿದೆ.ಕುಟುಂಬಸ್ಥರಲ್ಲಿ ಆತಂಕಉಮ್ರಾ ಯಾತ್ರೆಗೆ ತೆರಳಿರುವವರಲ್ಲಿ ಹಿರಿಯ ನಾಗರಿಕರು ಸೇರಿದಂತೆ ವಿವಿಧ ವಯೋಮಾನದವರು ಇರುವ ಸಾಧ್ಯತೆಯ ಹಿನ್ನೆಲೆಯಲ್ಲಿ, ಅವರ ಕುಟುಂಬಸ್ಥರು ಯಾತ್ರಿಕರ ಸುರಕ್ಷತೆ ಕುರಿತು ಕಳವಳ ವ್ಯಕ್ತಪಡಿಸುತ್ತಿದ್ದಾರೆ. ವಿಮಾನಯಾನ ಸಂಸ್ಥೆಗಳು ಪರ್ಯಾಯ ವಿಮಾನ ವ್ಯವಸ್ಥೆ ಕಲ್ಪಿಸಿ, ಪ್ರಯಾಣಿಕರನ್ನು ಹಂತ ಹಂತವಾಗಿ ಸುರಕ್ಷಿತವಾಗಿ ವಾಪಸ್ ಕರೆತರಬೇಕು ಎಂಬ ನಿರೀಕ್ಷೆ ಇದೆ.ಒಟ್ಟಿನಲ್ಲಿ, ಮೆಕ್ಕಾದಲ್ಲಿ ಸಿಲುಕಿರುವ ಕನ್ನಡಿಗರ ವಾಪಸಾತಿ ವಿಚಾರ ಇದೀಗ ರಾಜ್ಯ ಸರ್ಕಾರದ ಗಮನ ಸೆಳೆದಿದ್ದು, ವಿಮಾನಯಾನ ಸಂಸ್ಥೆಗಳು ನೀಡುವ ಪ್ರತಿಕ್ರಿಯೆ ಹಾಗೂ ಮುಂದಿನ ಕ್ರಮಗಳತ್ತ ಎಲ್ಲರ ಗಮನ ನೆಟ್ಟಿದೆ.

ಉಮ್ರಾ ಯಾತ್ರಾರ್ಥಿಗಳ ಸುರಕ್ಷತೆ ಹಾಗೂ ಅವರಿಗೆ ಅಗತ್ಯ ನೆರವು ಒದಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಅಗತ್ಯ ಕ್ರಮಗಳ ಬಗ್ಗೆ ಗಮನಹರಿಸಿದೆ.ಯಾತ್ರಾರ್ಥಿಗಳು ಅಥವಾ ಅವರ ಕುಟುಂಬಸ್ಥರು ಯಾವುದೇ ಸಮಸ್ಯೆ ಎದುರಿಸಿದಲ್ಲಿ ಕೆಳಗಿನ ಸಂಖ್ಯೆಗಳನ್ನು ಸಂಪರ್ಕಿಸಿ ಮಾಹಿತಿ ನೀಡುವಂತೆ ಮನವಿ ಮಾಡಲಾಗಿದೆ.

ಸಹಾಯವಾಣಿ ಸಂಪರ್ಕ ಸಂಖ್ಯೆಗಳು:

9483503132 – 7899707775

ಉರ್ದು ಮಾಧ್ಯಮ ಶಾಲೆಗಳಲ್ಲಿ 1,500 ಶಿಕ್ಷಕರ ನೇಮಕಾತಿಗೆ ಆಗ್ರಹ: ಸಿಎಂಗೆ ರೋಷನ್ ಬೇಗ್ ಮನವಿ

❏ ನೈಜ್ಯ ದೆಸೆ ನ್ಯೂಸ್



ಮೊದಲ ಹಂತದಲ್ಲಿ ಕನಿಷ್ಠ 800 ಉರ್ದು ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಲು ಒತ್ತಾಯಕರ್ನಾಟಕದ ಉರ್ದು ಮಾಧ್ಯಮ ಶಾಲೆಗಳಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಮಾಜಿ ಸಚಿವ ರೋಷನ್ ಬೇಗ್ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ. ರಾಜ್ಯದ ಉರ್ದು ಮಾಧ್ಯಮ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ. ಸಚಿವ ಸಂಪುಟದ ನಿರ್ಧಾರದಂತೆ ಮೊದಲ ಹಂತದಲ್ಲಿ ಕನಿಷ್ಠ 800 ಉರ್ದು ಮಾಧ್ಯಮ ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಿದ್ದಾರೆ.ಇದೇ ವೇಳೆ, ಕಖಖಿ, ಉಕಖಿ ಮತ್ತು ಊಖಖಿಖ ವಿಭಾಗಗಳಲ್ಲಿ ತಲಾ 500 ಹುದ್ದೆಗಳಂತೆ ಒಟ್ಟು 1,500 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂಬ ಅಭ್ಯರ್ಥಿಗಳ ಬೇಡಿಕೆಯನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿರುವುದಾಗಿ ತಿಳಿಸಿದ್ದಾರೆ.ಈ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡುವುದರ ಜೊತೆಗೆ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ರೋಷನ್ ಬೇಗ್ ತಿಳಿಸಿದ್ದಾರೆ.ರಾಜ್ಯದ ಉರ್ದು ಮಾಧ್ಯಮ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಶೀಘ್ರವಾಗಿ ಆರಂಭವಾಗಬೇಕು. ಇದರಿಂದ ಅರ್ಹ ಅಭ್ಯರ್ಥಿಗಳಿಗೆ ನ್ಯಾಯ ದೊರೆಯುವುದರ ಜೊತೆಗೆ ಉರ್ದು ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಲಭ್ಯವಾಗಲಿದೆ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದ್ದಾರೆ.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ಶಾಸಕ ರಾಜುಗೌಡ ಪಾಟೀಲ ಹೇಳಿಕೆ ಕ್ಷೇತ್ರದ ಅಭಿವೃದ್ಧಿಗೆ ಜನರ ಸಹಕಾರ ಮುಖ್ಯ

❏ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ದೇವರ ಹಿಪ್ಪರಗಿ ಮತಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ನನ್ನ ಗುರಿ, ಇದಕ್ಕಾಗಿ ಕಷ್ಟಪಟ್ಟು ಅನುದಾನ ತಂದು ಕೆಲಸ ಮಾಡುತ್ತಿದ್ದೇನೆ ಇದಕ್ಕೆ ನಿಮ್ಮೆಲ್ಲರ ಸಹಕಾರ ನನಗೆ ಅತೀ ಮುಖ್ಯವಾಗಿದೆ ಎಂದು ಶಾಸಕ ರಾಜುಗೌಡ ಪಾಟೀಲ (ಕು.ಸಾಲವಾಡಗಿ) ಹೇಳಿದರು. ತಾಳಿಕೋಟಿ ತಾಲೂಕಿನ ದೇವರ ಹಿಪ್ಪರಗಿ ಮತಕ್ಷೇತ್ರ ವ್ಯಾಪ್ತಿಯ ಬಿಳೇಭಾವಿ ಗ್ರಾಮದಲ್ಲಿ ರೂ.1.20 ಕೋಟಿ ಮೊತ್ತದ ಸಿಸಿ ರಸ್ತೆ, ಬಿ. ಸಾಲವಾಡಗಿ ಗ್ರಾಮದಲ್ಲಿ ರೂ.20 ಲಕ್ಷ ಮೊತ್ತದ ಡಾ.ಅಂಬೇಡ್ಕರ್ ಭವನ, ಬಿ.ಸಾಲವಾಡಗಿ ತಾಂಡಾದಲ್ಲಿ ರೂ.5 ಮೊತ್ತದ ಸೇವಾಲಾಲ್ ದೇವಸ್ಥಾನದ ಹತ್ತಿರ ಸಮುದಾಯ ಭವನ, ಬಂಡೆಪ್ಪನಹಳ್ಳಿ ಗ್ರಾಮದಲ್ಲಿ ರೂ. 25 ಲಕ್ಷ ಮೊತ್ತದ ಸಿಸಿ ರಸ್ತೆ ಹಾಗೂ ಎಲ್ಲಮ್ಮನ ಕೊಳ್ಳದಲ್ಲಿ ರೂ.10 ಲಕ್ಷ ಮೊತ್ತದ ಸಮುದಾಯ ಭವನ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ನಂತರ ಸಂತ ಸೇವಾಲಾಲ್ ಸಮಾಜದ ವತಿಯಿಂದ ತಾಂಡಾದಲ್ಲಿ ಹಮ್ಮಿಕೊಂಡ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು. ರಾಜ್ಯದಲ್ಲಿ ನಮ್ಮ ಪಕ್ಷದ ಸರ್ಕಾರ ಇಲ್ಲದಿರುವುದರಿಂದ ಅನುದಾನದ



ಕೊರತೆ ಇದೆ ಇದರ ಮಧ್ಯೆಯು ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳನ್ನು ನೀಡಲು ಅನುದಾನ ತಂದು ಕೆಲಸ ಮಾಡುತ್ತಿದ್ದೇನೆ. ನಿಮ್ಮ ಮತ ಋಣ ನನ್ನ ಮೇಲಿದೆ ಅದನ್ನು ನಾನೆಂದೂ ಮರೆಯುವುದಿಲ್ಲ ಇಲ್ಲಿಯವರೆಗೆ ತಾವುಗಳು ನನ್ನ ಮೇಲೆ ಪ್ರೀತಿ ವಿಶ್ವಾಸವನ್ನಿಟ್ಟು ಸಹಕಾರ ನೀಡಿದ್ದೀರಿ ಅದು ಮುಂದೆಯೂ ಹೀಗಿಯೇ ಇರಲಿ ಎಂದರು. ಜೆಡಿಎಸ್ ತಾಲೂಕಾ ಅಧ್ಯಕ್ಷ ಮಡುಸೌಕಾರ ಬಿರಾದಾರ ಪ್ರಸ್ತಾವಿಕವಾಗಿ ಮಾತನಾಡಿ ಶಾಸಕರು ಚುನಾವಣಾ ಸಂದರ್ಭದಲ್ಲಿ ಸಣ್ಣ ಸಣ್ಣ ಸಮಾಜಗಳಿಗೆ ಕೆಲವು ಆಶ್ವಾಸನೆಗಳನ್ನು ನೀಡಿದ್ದರು ಅದನ್ನು ಅವರು ಕಾರ್ಯರೂಪದಲ್ಲಿ ತರಲು ಪ್ರಾಮಾಣಿಕವಾಗಿ ಶಕ್ತಿಮೀರಿ ಪ್ರಯತ್ನಿಸಿದ್ದಾರೆ. ಅವರು ಕೊಟ್ಟ ಮಾತಿಗೆ ತಪ್ಪುವರಲ್ಲ, ಅನುದಾನವನ್ನು ಹೊಂದಿಸಿಕೊಂಡು ಕೆಲಸ ಮಾಡುವ ಅನಿವಾರ್ಯತೆ ಅವರಿಗಿದೆ ಇದನ್ನು ನಾವೆಲ್ಲರೂ ತಿಳಿದುಕೊಳ್ಳುವ ಅಗತ್ಯವಿದೆ ಎಂದರು. ಇದೇ ಸಂದರ್ಭದಲ್ಲಿ ಗ್ರಾಮಸ್ಥರ ವತಿಯಿಂದ ಶಾಸಕ ರಾಜುಗೌಡರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ತಾಪಂ ಮಾಜಿ ಅಧ್ಯಕ್ಷ ರಾಜುಗೌಡ ಕೋಳೂರ, ಪ್ರಭುಗೌಡ ನಾಡಗೌಡ(ಶಳ್ಳಗಿ), ಶ್ರೀಕಾಂತಗೌಡ ದೊಡ್ಡಮನಿ, ನಾನಾಗೌಡ ಅನಂತರೆಡ್ಡಿ, ಸಣ್ಣ ಪೂಜಾರಿ ಮುತ್ಯಾ, ರಾಜುಗೌಡ ಯಾಳಗಿ, ಕಾಡಪ್ಪ ಪೂಜಾರಿ, ಮುತ್ತುಗೌಡ ಅಸ್ಕಿ, ಸಾಹೇಬಗೌಡ ಅನಂತರೆಡ್ಡಿ, ಜಗದೀಶ ದೊಡ್ಡಪೂಜಾರಿ, ಅಶೋಕ ಅಸ್ಕಿ, ನಿಂಗಣ್ಣ ಕಲಬುರ್ಗಿ, ಜಗನ್ನಾಥ ಮಸರಕಲ್ಲ, ಬಸವರಾಜ ಅರಸನಾಳ, ಮಲ್ಲಣ್ಣ ಕೆಸರಟ್ಟಿ, ಶಾಂತಪ್ಪ ಇಣಚಗಲ್, ಬಾಗಪ್ಪ ಬರ್ದೇನಾಳ, ಸೇವಾಲಾಲ್ ಸಮಾಜದ ಅಧ್ಯಕ್ಷ ಬಾಸು ಜಾಧವ, ರಮೇಶ ಚೌವಾಣ, ಹಣಮಂತ ರಾಠೋಡ, ಬಾಬು ಚೌಹಾಣ, ಮೋಹನ ರಾಥ-ೋಡ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಜಗತ್ತಿನ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ – ಆಂಜನೇಯ ನಸಲಾಪುರ

❏ ನೈಜ್ಯ ದೆಸೆ ನ್ಯೂಸ್

ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಂ ಆರುಹ್ಯ ಕವಿತಾ ಶಾಖಂ ವಂದೇ ವಾಲ್ಮೀಕಿ ಕೋಕಿಲಂ ಎಂಬ ಶ್ರೀರಾಮ ರಕ್ಷಾ ಸ್ತೋತ್ರದ ಪ್ರಸಿದ್ಧ ಶ್ಲೋಕದಲ್ಲಿ ಬುಧಕೌಶಿಕ ಮುನಿಗಳು ಮಹರ್ಷಿ ವಾಲ್ಮೀಕಿಯವರನ್ನು ಕೋಗಿಲೆಗೆ ಹೋಲಿಸಿದ್ದಾರೆ. ರಾಮಾಯಣ ಎಂಬ ಕಾವ್ಯದ ಶಾಖೆಯ ಮೇಲೆ ಕುಳಿತು ಶ್ರೀರಾಮನ ನಾಮವನ್ನು ಮಧುರವಾಗಿ ಹಾಡುವ ಕೋಗಿಲೆಯಂತೆ ವಾಲ್ಮೀಕಿಯವರನ್ನು ಈ ಶ್ಲೋಕ ಸ್ತುತಿಸುತ್ತದೆ.ಅದೇ ರೀತಿ ಇನ್ನೊಂದು ಶ್ಲೋಕವು ವಾಲ್ಮೀಕಿಯ ಬಗ್ಗೆ ತಿಳಿಸುತ್ತದೆ. ವಾಲ್ಮೀಕಿ ಗಿರಿ ಸಂಭವೂತಾ ರಾಮಸಾಗರ ಗಾಮಿನೀ ಪುನಾತು ಭುವನಂ ಪುಣ್ಯಾ ರಾಮಾಯಣ ಮಹಾನದೀ ಎಂಬ ಶ್ಲೋಕವು ವಾಲ್ಮೀಕಿಯವರನ್ನು ಪರ್ವತಕ್ಕೆ ಮತ್ತು ರಾಮಾಯಣವನ್ನು ಆ ಪರ್ವತದಿಂದ ಉಗಮಿಸಿದ ಪವಿತ್ರ ಮಹಾನದಿಗೆ ಹೋಲಿಸುತ್ತದೆ. ಆ ನದಿ ಇಡೀ ಜಗತ್ತಿಗೆ ಧರ್ಮ ನೀತಿ ಮತ್ತು ಮಾನವೀಯತೆಯ ಸಂದೇಶವನ್ನು ಹರಡುತ್ತಾ ಶ್ರೀರಾಮನ ಗುಣಸಾಗರದಲ್ಲಿ ಲೀನವಾಗುತ್ತದೆ ಎಂಬ ಅರ್ಥವನ್ನು ಈ ಶ್ಲೋಕ ಸಾರುತ್ತದೆ.ಭಾರತೀಯ ಸಂಸ್ಕೃತಿಯಲ್ಲಿ ಅನೇಕ ಋಷಿಗಳು ಮುನಿಗಳು ಹಾಗೂ ಮಹಾಕವಿಗಳು ಜನಿಸಿದ್ದಾರೆ.



ಆದರೆ ಋಷಿಯಾಗಿಯೂ ಮಹಾಕವಿಯಾಗಿಯೂ, ಆದಿಕವಿ ಎಂಬ ಬಿರುದಿಗೆ ಪಾತ್ರರಾದವರು ಮಹರ್ಷಿ ವಾಲ್ಮೀಕಿಯವರೇ. ಅವರು ರಚಿಸಿದ ರಾಮಾಯಣ ವಿಶ್ವಸಾಹಿತ್ಯದ ಶ್ರೇಷ್ಠ ಮಹಾಕಾವ್ಯಗಳಲ್ಲಿ ಒಂದಾಗಿ ಇಂದಿಗೂ ಮಾನವ ಸಮಾಜಕ್ಕೆ ಆದರ್ಶ ಜೀವನದ ದಾರಿಯನ್ನು ತೋರಿಸುತ್ತಿದೆ.ಮಹರ್ಷಿ ವಾಲ್ಮೀಕಿಯವರ ಜೀವನದ ಕುರಿತು ವಿವಿಧ ಪುರಾಣಗಳು ಮತ್ತು ಜನಪದ ಪರಂಪರೆಗಳಲ್ಲಿ ಹಲವು ಕಥೆಗಳು ದೊರೆಯುತ್ತವೆ. ಅವುಗಳ ಪ್ರಕಾರ ರತ್ನಾಕರ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದ ಅವರು, ಮಹರ್ಷಿ ನಾರದರ ಉಪದೇಶದಿಂದ ಆತ್ಮಪರಿವರ್ತನೆ ಹೊಂದಿ ತಪಸ್ಸಿನ ಮೂಲಕ ಮಹರ್ಷಿ ವಾಲ್ಮೀಕಿಯಾದರು. ತಮಸಾ ನದಿಯ ತೀರದಲ್ಲಿ ಕ್ರೌಂಚ ಪಕ್ಷಿಯ ವಿಯೋಗವನ್ನು ಕಂಡು ಅವರ ಬಾಯಿಂದ ಸಹಜವಾಗಿ ಹೊರಬಂದ ಶ್ಲೋಕವೇ ಸಂಸ್ಕೃತ ಸಾಹಿತ್ಯದ ಮೊದಲ ಕಾವ್ಯಪದ್ಯವೆಂದು ಪರಿಗಣಿಸಲಾಗಿದೆ. ಈ ಕಾರಣದಿಂದಲೇ ಅವರಿಗೆ ಆದಿಕವಿ ಎಂಬ ಗೌರವ ಸಂದಿದೆ.ಸುಮಾರು 24 ಸಾವಿರ ಶ್ಲೋಕಗಳು ಹಾಗೂ ಏಳು ಕಾಂಡಗಳನ್ನು ಒಳಗೊಂಡ ರಾಮಾಯಣವು ಶ್ರೀರಾಮನ ಆದರ್ಶ, ಸೀತೆಯ ಸಹನೆ, ಲಕ್ಷ್ಮಣನ ತ್ಯಾಗ, ಭರತನ ನಿಷ್ಠೆ ಮತ್ತು ಹನುಮಂತನ ಭಕ್ತಿಯನ್ನು ಮಾನವ ಸಮಾಜಕ್ಕೆ ಮಾದ-ರಿಯಾಗಿ ಪರಿಚಯಿಸುತ್ತದೆ. ರಾಮಾಯಣ ಕೇವಲ ಧಾರ್ಮಿಕ ಗ್ರಂಥವಲ್ಲ; ಅದು ಬದುಕಿನ ಮೌಲ್ಯಗಳನ್ನು ಬೋಧಿಸುವ ಶಾಶ್ವತ ಜೀವನದರ್ಶನವಾಗಿದೆ.ಮಹರ್ಷಿ ವಾಲ್ಮೀಕಿಯವರು ಕೇವಲ ಕವಿಯಲ್ಲ; ಸಮಾಜ ಸುಧಾರಕ, ತತ್ವಜ್ಞಾನಿ, ಶಿಕ್ಷಣ ಚಿಂತಕ ಹಾಗೂ ರಾಜನೀತಿ ತಜ್ಞರಾಗಿಯೂ ಭಾರತೀಯ ಚಿಂತನೆಗೆ ಅಪಾರ ಕೊಡುಗೆ ನೀಡಿದ್ದಾರೆ. ಆದ್ದರಿಂದ ಅವರನ್ನು ಯಾವುದೇ ಒಂದು ಸಮುದಾಯಕ್ಕೆ ಸೀಮಿತಗೊಳಿಸದೆ, ಸಮಸ್ತ ಭಾರತೀಯರ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿ ಕಾಣಬೇಕಾಗಿದೆ.ಪರಂಪರೆಯ ಪ್ರಕಾರ ಮಹರ್ಷಿ ವಾಲ್ಮೀಕಿಂ-ುವರ ಸಮುದಾಯದಲ್ಲಿ ಬೇಡರ ಕಣ್ಣಪ್ಪ, ಶಬರಿ, ಗಂಡುಗಲಿ ಕುಮಾರರಾಮ, ಸುರಪುರದ ವೆಂಕಟಪ್ಪ ನಾಯಕ, ವೀರ ಮದಕರಿ ನಾಯಕ ಸೇರಿದಂತೆ ಅನೇಕ ಮಹನೀಯರು ಜನಿಸಿ ಸಮಾಜ ಮತ್ತು ದೇಶಕ್ಕೆ ತಮ್ಮದೇ ಆದ ಸೇವೆ ಸಲ್ಲಿಸಿದ್ದಾರೆ ಎಂದು ಹೇಳಲಾಗುತ್ತದೆ.ಇಂದಿನ ಸಂದರ್ಭದಲ್ಲಿ ಸಮುದಾಯವು ಶಿಕ್ಷಣ, ಉದ್ಯೋಗ, ಶಿಷ್ಯವೇತನ, ಸರ್ಕಾರಿ ಸೌಲಭ್ಯಗಳ ಸಮರ್ಪಕ ಅನುಷ್ಠಾನ ಹಾಗೂ ಸಾಮಾಜಿಕ ನ್ಯಾಯ ಸೇರಿದಂತೆ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಗಳ ಪರಿಹಾರಕ್ಕೆ ಬಲಿಷ್ಠ ನಾಯಕತ್ವ, ಸಂಘಟಿತ ಹೋರಾಟ ಮತ್ತು ಸಮಾಜದ ಒಗ್ಗಟ್ಟು ಅಗತ್ಯವಾಗಿದೆ. ಜನಪ್ರತಿನಿಧಿಗಳು ತಮ್ಮ ಜವಾಬ್ದಾ-ರಿಯನ್ನು ಅರಿತು ಸಮುದಾಯದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು.ಮಹರ್ಷಿ ವಾಲ್ಮೀಕಿಯವರ ಆದ-ರ್ಶಗಳು ಒಂದು ಸಮುದಾಯಕ್ಕೆ ಮಾತ್ರ ಸೀಮಿತವಲ್ಲ. ಸತ್ಯ, ಧರ್ಮ, ತ್ಯಾಗ, ಕರುಣೆ ಮತ್ತು ಮಾನವೀಯತೆಯ ಸಂದೇಶವನ್ನು ಸಾರುವ ಅವರ ಜೀವನ ಹಾಗೂ ರಾಮಾಯಣದ ಮೌಲ್ಯಗಳು ಇಡೀ ಮಾನವಕುಲಕ್ಕೆ ದಾರಿದೀಪವಾಗಿವೆ. ಅವರ ಆದರ್ಶಗಳನ್ನು ಅಳವಡಿಸಿಕೊಂಡಾಗ ಮಾತ್ರ ಉತ್ತಮ ಸಮಾಜ ಮತ್ತು ಸುಭದ್ರ ರಾಷ್ಟ್ರ ನಿರ್ಮಾಣ ಸಾಧ್ಯ.

ಆಂಜನೇಯ ನಸಲಾಪುರ

ಸಾಹಿತ್ಯ ಸಿಂಚನ

ಕಳೆದುಹೋದ ನಗುವಿನ ಹುಡುಕಾಟ

ಕನ್ನಡಿ ಮುಂದೆ ನಿಂತಾಗ ಇಂದು,
ಮುಖವಿದೆ ಆದರೆ ನಗು ಕಾಣದು,
ಕಣ್ಣಿನಲ್ಲಿ ಸಾವಿರ ಮಾತಿದ್ದರೂ,
ಮನದ ನೋವು ಮಾತ್ರ ಹೊರಬರದು.

ಒಮ್ಮೆ ಸಣ್ಣ ಕ್ಷಣವೂ ಸಾಕಾಗಿತ್ತು,
ತುಟಿಗಳ ಮೇಲೆ ನಗು ಮೂಡಿಸಲು,
ಇಂದು ಸಾವಿರ ಕಾರಣಗಳಿದ್ದರೂ,
ಮನಸ್ಸು ಸಿದ್ಧವಿಲ್ಲ ನಗಲು.

ಹಳೆಯ ದಿನಗಳ ದಾರಿಯಲ್ಲಿ ನಡೆದು,
ಮರೆತ ಸಂತೋಷವ ಹುಡುಕುತ್ತೇನೆ,
ಬಾಲ್ಯದ ಆ ಮುಗ್ಧ ನಗುವನ್ನು,
ನೆನಪುಗಳ ನಡುವೆ ಕರೆಯುತ್ತೇನೆ.

ಕಳೆದುಹೋದ ಕ್ಷಣಗಳು ಹೇಳುತ್ತವೆ,
"ನಿನ್ನ ನಗು ಇನ್ನೂ ನಿನ್ನೊಳಗಿದೆ,"
ಮನದ ಬಾಗಿಲು ತೆರೆದು ನೋಡಿದರೆ,
ಅದು ಮೌನದ ಹಿಂದೆ ಅಡಗಿದೆ.

ಕಣ್ಣೀರಿನ ಹನಿಗಳ ನಡುವೆ ಕೂಡ,
ಒಂದು ಪುಟ್ಟ ಭರವಸೆ ಉಳಿದಿದೆ,
ಕತ್ತಲಾದ ಈ ಬದುಕಿನ ದಾರಿಯಲ್ಲಿ,
ಹೊಸ ನಗುವಿನ ಬೆಳಕು ಕಾದಿದೆ.

ನಿನ್ನೆ ಕಳೆದುಕೊಂಡ ನಗುವಿಗಾಗಿ,
ಇಂದು ಹುಡುಕಾಟ ಮುಂದುವರಿಯಲಿ,
ನಾಳೆಯ ಹೊಸ ಪ್ರಭಾತದೊಂದಿಗೆ,
ನನ್ನ ನಗು ಮತ್ತೆ ಅರಳಲಿ.

ಶ್ರೀ ಸಂತ ಸೇವಾಲಾಲ್ ಸಮಾಜದಿಂದ ಶಾಸಕರಿಗೆ ಸನ್ಮಾನ


❑ ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ತಾಲೂಕಿನ ಬಿ. ಸಾಲವಾಡಗಿ ತಾಂಡಾದ ಶ್ರೀ ಸಂತ ಸೇವಾಲಾಲ್ ದೇವಸ್ಥಾನದ ಹತ್ತಿರ ನೂತನವಾಗಿ ನಿರ್ಮಾಣ ಗೊಳ್ಳಲಿರುವ ಸಮುದಾಯ ಭವನಕ್ಕೆ ಅನುದಾನವನ್ನು ಬಿಡುಗಡೆಗೊಳಿಸಿದ ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕರಾದ ರಾಜುಗೌಡ ಪಾಟೀಲ ಇವರನ್ನು ರವಿವಾರ ಸಮಾಜದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಜೆಡಿಎಸ್ ತಾಲೂಕ ಅಧ್ಯಕ್ಷ ಮಡುಸೌಕಾರ ಬಿರಾದಾರ, ತಾಪಂ ಮಾಜಿ ಅಧ್ಯಕ್ಷ ರಾಜುಗೌಡ ಕೋಳೂರ, ನಾನಾಗೌಡ ಅನಂತರೆಡ್ಡಿ, ನಿಂಗಣ್ಣ ಕಲಬುರ್ಗಿ, ಅಶೋಕ ಅಸ್ಕಿ, ಪ್ರಭುಗೌಡ ನಾಡಗೌಡ, ರಾಜುಗೌಡ ಯಾಳಗಿ, ಸೇವಾಲಾಲ್ ಸಮಾಜದ ಅಧ್ಯಕ್ಷ ಬಾಸು ಜಾಧವ, ಶ್ರೀಕಾಂತಗೌಡ ದೊಡ್ಡಮನಿ, ಸಾಹೇಬ ಗೌಡ ಅನಂತರೆಡ್ಡಿ, ರಮೇಶ ಚೌಹಾಣ, ಹಣಮಂತ ರಾಥೋಡ, ಬಾಬು ಚೌಹಾಣ, ಮೋಹನ ರಾಥೋಡ ಹಾಗೂ ಸೇವಾಲಾಲ್ ಸಮಾಜದ ಬಾಂಧವರು ಉಪಸ್ಥಿತರಿದ್ದರು.

ಕೆ.ಹೊಸಹಳ್ಳಿ ಡೇರೆದ ನಾಗಲಿಂಗೇಶ್ವರ ದೇವಸ್ಥಾನಕ್ಕೆ ಕರ್ನಾಟಕದ ಸಿಂಗಂ ಹಾಗೂ ದಕ್ಷ IPS ಅಧಿಕಾರಿ ರವಿ ಡಿ ಚನ್ನಣ್ಣನವರ್ ಭೇಟಿ

❑ ನೈಜ್ಯ ದೆಸೆ ನ್ಯೂಸ್



ಸಿಂಧನೂರು ತಾಲೂಕಿನ ತುರವಿಹಾಳ ಸಮೀಪದ ಕೆ.ಹೊಸಹಳ್ಳಿ ಗ್ರಾಮದ ಶ್ರೀ ಡೇರೆದ ನಾಗಲಿಂಗೇಶ್ವರ ದೇವಸ್ಥಾನಕ್ಕೆ ಕರ್ನಾಟಕದ ಸಿಂಗಂ ಎಂದೇ ಹೆಸರುವಾಸಿಯಾದ ಹಾಗೂ ಕರ್ನಾಟಕದ ಸರ್ಕಾರದ ದಕ್ಷ ಐಪಿಎಸ್ ಅಧಿಕಾರಿ ರವಿ.ಡಿ. ಚನ್ನಣ್ಣನವರು ಭೇಟಿ ನೀಡಿದರು.ಈ ಸಂಧರ್ಭದಲ್ಲಿ ದೇವಸ್ಥಾನ ಸಮಿತಿ ವತಿಯಿಂದ ಶ್ರೀ ನಾಗಲಿಂಗೇಶ್ವರರ ಜೀವನ ಚರಿತ್ರೆಯ ಪುಸ್ತಕ ನೀಡಿ ಸನ್ಮಾನಿಸಿ ಗೌರವಿಸಲಾಯಿತು.ಕೆ.ಹೊಸಹಳ್ಳಿ ಶ್ರೀ ಡೇರೆದ ನಾಗಲಿಂಗೇಶ್ವರರು ಸಂತರಾಗಿ ಶರಣರಾಗಿ ಹಲವಾರು ಪವಾಡಗಳನ್ನು ಮಾಡಿ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಮೂಲಕ ಜನಸಾಮಾನ್ಯರಲ್ಲಿ ಮನೆಮಾತಾದವರು.ಇಂತಹ ಪುಣ್ಯ ಪುರುಷರ ಮಹಾತ್ಮರ ದರ್ಶನ ಪಡೆದದ್ದು ನಾವೇ ಧನ್ಯರು.ಪ್ರತಿದಿನ ನಾವು ನೀವುಗಳೆಲ್ಲರೂ ಈ ಮಹಾತ್ಮರು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ನಡೆಯೋಣ ಎಂದು ರವಿ.ಡಿ.ಚನ್ನಣ್ಣನವರು ತಿಳಿಸಿದರು.ಈ ಸಂಧರ್ಭದಲ್ಲಿ ನಾಗಲಿಂಗೇಶ್ವರ ದೇವಸ್ಥಾನದ ಮಠಾಧೀಶರಾದ ಹನುಮಂತಪ್ಪ ಮಠ,ಅಮರೇಶ ಮಠ,ಶಿವರಾಜ ಪಟೇಲ್ ಗುಂಜಳ್ಳಿ, ಮಲ್ಲಿಕಾರ್ಜುನ ಕ್ಯಾಡೇದ,ಲಕ್ಷ್ಮಣ್ ನಾಯಕ್ ಮಠ,ರಾಯಚೂರು ಜಿಲ್ಲಾ ಬಿಜೆಪಿ ಪಕ್ಷದ ಎಸ್.ಟಿ.ಮೋರ್ಚಾದ ಉಪಾಧ್ಯಕ್ಷರಾದ ನಾಗಲಿಂಗ ನಾಯಕ ತೀರ್ಥಭಾವಿ,ಬಸವರಾಜ ನಾಯಕ್ ಗುಂಜಳ್ಳಿ,ಹುಲಿಗೆಣಟಿಜಜಜಿಟಿಜಜಶ ನಾಯಕ ನೇಕೆಡಿ,ರಮೇಶ ನಾಯಕ ತಳವಾರ,ಯಮನೂರ ಬೈರಾಪುರ, ಗಂಗಾಧರ ನಾಯಕ ನೇಕೆಡಿ ಹಾಗೂ ಊರಿನ ಹಿರಿಯರು,ಯುವಕರು ಉಪಸ್ಥಿತರಿದ್ದರು.

ಮತಗಳ್ಳತನದ ವಿರುದ್ಧ ಕಾಂಗ್ರೆಸ್ ಸಮರ: 'ವೋಟ್ ಬಚಾವೋ, ದೇಶ್ ಬಚಾವೋ' ಅಭಿಯಾನಕ್ಕೆ ಬಸನಗೌಡ ಬಾದರ್ಲಿ ಸಾಥ್

ತಮಿಳುನಾಡಿನ ನಾಲ್ಕು ಜಿಲ್ಲೆಗಳಲ್ಲಿ ಪತ್ರಿಕಾಗೋಷ್ಠಿ; ಮತದಾರರ ಹಕ್ಕುಗಳ ರಕ್ಷಣೆಗೆ ಜನಜಾಗೃತಿ

❑ ನೈಜ್ಯ ದೆಸೆ ನ್ಯೂಸ್



ತಮಿಳುನಾಡು: ಪ್ರಜಾಪ್ರಭುತ್ವದ ಬಲವರ್ಧನೆ ಹಾಗೂ ಮತದಾರರ ಹಕ್ಕುಗಳ ರಕ್ಷಣೆಯ ಉದ್ದೇಶದಿಂದ ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ 'ವೋಟ್ ಬಚಾವೋ, ದೇಶ್ ಬಚಾವೋ' (ಮತ ಉಳಿಸಿ, ದೇಶ ಉಳಿಸಿ) ಅಭಿಯಾನದಡಿ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರು ತಮಿಳುನಾಡಿನ ವಿವಿಧ ಜಿಲ್ಲೆಗಳಲ್ಲಿ ಪತ್ರಿಕಾಗೋಷ್ಠಿಗಳನ್ನು ನಡೆಸಿ ಮತಗಳ್ಳತನದ ವಿರುದ್ಧ ಜನಜಾಗೃತಿ ಮೂಡಿಸಿದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ನಾಯಕರ ನಿರ್ದೇಶನದ ಮೇರೆಗೆ ತಮಗೆ ವಹಿಸಲಾದ ಜವಾಬ್ದಾ-ರಿಯನ್ನು ನಿರ್ವಹಿಸಿದ ಬಸನಗೌಡ ಬಾದರ್ಲಿ ಅವರು, ತಮಿಳುನಾಡಿನ ಕೃಷ್ಣಗಿರಿ ಪೂರ್ವ, ಕೃಷ್ಣಗಿರಿ ಪಶ್ಚಿಮ, ತಿರುಪತ್ತೂರು ಹಾಗೂ ಧರ್ಮಪುರಿ ಜಿಲ್ಲೆಗಳಲ್ಲಿ ನಡೆದ ಪತ್ರಿಕಾಗೋಷ್ಠಿಗಳ ಮೂಲಕ ಅಭಿಯಾನದ ಉದ್ದೇಶವನ್ನು ಜನ-ರಿಗೆ ತಲುಪಿಸಿದರು.ಮತದಾನವು ಕೇವಲ ಚುನಾವಣಾ ಪ್ರಕ್ರಿಯೆಯಲ್ಲ; ಅದು ಪ್ರಜಾಪ್ರಭುತ್ವದ ಜೀವಾಳವಾಗಿದೆ. ಪ್ರತಿಯೊಬ್ಬ ಪ್ರಜೆಯ ಮತಕ್ಕೂ ಸಮಾನ ಮೌಲ್ಯವಿದ್ದು, ಮತದಾರರ ಹಕ್ಕುಗಳನ್ನು ರಕ್ಷಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಮುಖ ಜವಾಬ್ದಾರಿಯಾಗಿದೆ. ಮತದಾರರ ಪಟ್ಟಿಯ ಪಾರದರ್ಶಕತೆ, ಮತದಾನದ ಹಕ್ಕಿನ ಸಂರಕ್ಷಣೆ ಹಾಗೂ ಚುನಾವಣಾ ವ್ಯವಸ್ಥೆಯ ಮೇಲಿನ ಜನರ ವಿಶ್ವಾಸವನ್ನು ಬಲಪಡಿಸುವುದು ಇಂತಹ ಅಭಿಯಾನಗಳ ಮುಖ್ಯ ಉದ್ದೇಶವಾಗಿದೆ. ರಾಹುಲ್ ಗಾಂಧಿ ಹಾಗೂ ಎಐಸಿಸಿ ನಾಯಕರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಈ ಅಭಿಯಾನದ ಮೂಲಕ ಮತದಾರರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಜನರೊಂದಿಗೆ ಸಂವಾದ ನಡೆಸುತ್ತಿದ್ದಾರೆ.ಪ್ರಮುಖ ನಾಯಕರ ಉಪಸ್ಥಿತಿ ಈ ಸಂದರ್ಭದಲ್ಲಿ ಸಂಸದ ಕೆ. ಗೋಪಿನಾಥ್, ತಮಿಳುನಾಡು ಕಾಂಗ್ರೆಸ್ ಸಮಿತಿಯ ವೀಕ್ಷಕರು ಹಾಗೂ ರಾಜ್ಯ ಉಪಾಧ್ಯಕ್ಷ ರಾಮ ಸುಗಂಧನ್, ಕೃಷ್ಣಗಿರಿ ಪೂರ್ವ ಜಿಲ್ಲೆಯ ಖಖಂ-2 ಉಸ್ತುವಾರಿ ಶ್ರೀನಿವಾಸ ಕುಮಾರ್, ಕೃಷ್ಣಗಿರಿ ಪಶ್ಚಿಮ ಜಿಲ್ಲೆಯ ಖಖಂ-2 ಉಸ್ತುವಾರಿ ಸುಂದರಮೂರ್ತಿ, ಕೃಷ್ಣಗಿರಿ ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹ-ರೀಶ್ ಬಾಬು, ತಿರುಪತ್ತೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜೆ. ವಿಜಯ್ ಇಲಂಚೆಳಿಯನ್ ಹಾಗೂ ಧರ್ಮಪುರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಗೋವಿ ಚಿತ್ತರಸು ಸೇರಿದಂತೆ ವಿವಿಧ ಜಿಲ್ಲೆಗಳ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.ನಾಲ್ಕು ಜಿಲ್ಲೆಗಳಲ್ಲಿ ನಡೆದ ಈ ಕಾರ್ಯಕ್ರಮದ ಮೂಲಕ ಮತದಾರರ ಹಕ್ಕುಗಳ ರಕ್ಷಣೆ ಮತ್ತು ಪ್ರಜಾಪ್ರಭುತ್ವದ ಸಂರಕ್ಷಣೆಯ ಸಂದೇಶವನ್ನು ಜನರಿಗೆ ತಲುಪಿಸುವ ಪ್ರಯತ್ನ ಮಾಡಲಾಯಿತು.

ಕಾರುಣ್ಯಾಶ್ರಮದ ಕಾರ್ಯ ದೇವರು ಮೆಚ್ಚುವಂಥದ್ದು – ಅನ್ನದಾನಿ ಭಾರತಿ ಅಪ್ಪಣ್ಣ ಮಹಾಸ್ವಾಮಿಗಳು

❑ ನೈಜ್ಯ ದೆಸೆ ನ್ಯೂಸ್



ಸಿಂಧನೂರು – ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸಮಾಜದ ವತಿಯಿಂದ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್(ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ " ನೊಂದವರ ನಲಿವು" ಎನ್ನುವ ಕಾರ್ಯಕ್ರಮದಡಿಯಲ್ಲಿ ಆಶ್ರಯದಾತರುಗಳಿಗೆ ಹಾಸಿಗೆ ಹೊದಿಕೆಗಳನ್ನು ವಿತರಿಸಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ರಾಜ್ಯದ ಎಲ್ಲಾ ಹಡಪದ ಅಪ್ಪಣ್ಣ ಸಮಾಜದ ಜಿಲ್ಲಾಧ್ಯಕ್ಷರುಗಳು ತಾಲೂಕಾಧ್ಯಕ್ಷರುಗಳು ಮತ್ತು ಪದಾಧಿಕಾರಿಗಳ ಸಮಕ್ಷಮದಲ್ಲಿ ಅಥ-ರ್ಪೂರ್ಣವಾಗಿ ಕಾರ್ಯಕ್ರಮ ನೆರವೇರಿತು. ಈ ಕಾರ್ಯಕ್ರಮದಲ್ಲಿ ಹಡಪದ ಅಪ್ಪಣ್ಣ ಸಮಾಜದ ತಂಗಡಿಗಿಯ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಅನ್ನದಾನಿ ಭಾರತಿ ಅಪ್ಪಣ್ಣ ಮಹಾಸ್ವಾಮಿಗಳಿಗೆ ಹಾಗೂ ರಾಜ್ಯಾಧ್ಯಕ್ಷರಾದ ದೇವು ಮುಂಡರಗಿ ಇವರುಗಳಿಗೆ ಆಶ್ರಮದ ವತಿಯಿಂದ ನೆನಪಿನ ಕಾಣಿಕೆಯನ್ನು ವಿತರಿಸಲಾಯಿತು. ನಂತರ ಕಾರ್ಯಕ್ರಮದ ದಿವ್ಯ ಸಾಹಿತ್ಯ ವಹಿಸಿದ್ದ ತಂಗಡಗಿಯ ಹಡಪದ ಅಪ್ಪಣ್ಣ ಸಮಾಜದ ಹೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಅನ್ನದಾನಿ ಭಾರತೀಯ ಅಪ್ಪಣ್ಣ ಮಹಾಸ್ವಾಮಿಗಳು ನಮ್ಮ ಸಮಾಜದ ಎಲ್ಲಾ ಬಂಧು ಬಾಂಧವರು ಕಾರುಣ್ಯ ಎನ್ನುವ ಕರುಣೆ ಕುಟುಂಬಕ್ಕೆ ನಿರಂತರವಾಗಿ ಸಹಾಯ ಸಹಕಾರ ಮಾಡುತ್ತಾ ನೊಂದವರ ಬಾಳಿಗೆ ನಾಡಿಮಿಡಿತವಾಗಿ ಮಾಡುತ್ತಿರುವ ಈ ಕಾರ್ಯ ನಮ್ಮ ಸಮಾಜದ ಘನತೆ ಗೌರವವನ್ನು ಹೆಚ್ಚಿಸಿದೆ. ಕಾರುಣ್ಯಾಶ್ರಮದ ಕಾರ್ಯ ದೇವರು ಮೆಚ್ಚುವಂತದ್ದು ಇಂತಹ ಪುಣ್ಯ ಕಾರ್ಯ ಮಾಡುತ್ತಿರುವ ಸುಜಾತ ಚನ್ನಬಸಯ್ಯ ದಂಪತಿಗಳು ಸಮಾಜಕ್ಕೆ ಆದರ್ಶವಾಗಿದ್ದಾರೆ. ಈ ಸಂಸ್ಥೆಯನ್ನು ಹುಟ್ಟು ಹಾಕಿ ಇಡೀ ಕುಟುಂಬವನ್ನೇ ಅಂಧ ಅನಾಥರ ಬಾಳಿಗಾಗಿ ಸೇವೆ ಮಾಡುವ ಸಾಮಾನ್ಯ ಜಂಗಮನಾದ ಅಮರಯ್ಯ ಸ್ವಾಮಿ ನಮ್ಮ ನಾಡಿನ ಅನಾಥರ ಆರಾಧ್ಯ ದೈವ ಸಮಾಜದ ಹಲವಾರು ಟಿ ಕೆ ಟಿಪ್ಪಣಿ ಅವಮಾನ ಅಪಪ್ರಚಾರಗಳನ್ನು ಕಿವಿಗೊಡದೆ ಅವುಗಳನ್ನು ಸಂತೋಷವಾಗಿ ಸ್ವೀಕಾರ ಮಾಡಿ ಸೇವೆ ಮಾಡಿ ನಾಡಿನ ಎಲ್ಲ ಬಸವಾದಿ ಶರಣರ ಅರ ಗುರು ಚರಮೂರ್ತಿಗಳ ಆಶೀರ್ವಾದ ಕಾರುಣ್ಯ ಸಂಸ್ಥೆಗೆ ಇರುತ್ತದೆ. ನಮ್ಮ ಸಮಾಜದ ಪ್ರತಿಯೊಬ್ಬರೂ ಕೂಡ ಕಾರುಣ್ಯಾಶ್ರಮದ ಸೇವೆಯ ಜೊತೆಗಿರುತ್ತಾರೆ. ಕಾರುಣ್ಯದಂತಹ ಕರುಣೆಯ ಕುಟುಂಬದಲ್ಲಿ ಆಶ್ರಯ ಪಡೆದಿರುವ ಎಲ್ಲಾ ಶರಣ ಜೀವಿಗಳಿಗೆ ಆಯಸ್ಸು ಆಯುರಾರೋಗ್ಯ ಸುಖ ಶಾಂತಿ ನೆಮ್ಮದಿ ದೊರೆಯಲಿ ಎಂದು ಆಶೀರ್ವಚನ ನೀಡಿ ಆಶ್ರಮದ ಸೇವೆಗೆ ಆಶೀರ್ವದಿಸಿದರು. ನಂತರ ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸಮಾಜದ ರಾಜ್ಯಾಧ್ಯಕ್ಷರಾದ ದೇವು ಮುಂಡರಗಿ ಮಾತನಾಡಿ ಕಾಯಕದೊಂದಿಗೆ ಬದುಕು ನಮ್ಮ ಸಮಾಜ ಕಾರುಣ್ಯದಂತಹ ಕರುಣೆಯ ಕುಟುಂಬದೊಂದಿಗೆ ಮಾಡುತ್ತಿರುವ ಈ ಸೇವೆ ನಮ್ಮ ಸಮಾಜಕ್ಕೆ ಗೌರವ ತಂದು ಕೊಟ್ಟಿದೆ. ಸಿಂಧನೂರ್ನ ನಮ್ಮ ಸಮಾಜದ ಎಲ್ಲಾ ಮುಖಂಡರುಗಳು ಅರಣ್ಯ ಆಶ್ರಮದ ಸೇವೆಯಲ್ಲಿ ಭಾಗವಹಿಸುತ್ತಿರುವದು ನಮ್ಮ ಸಮಾಜಕ್ಕೆ ಸಂತೋಷವಾಗಿದೆ. ನಮ್ಮ ಸಮಾಜ ನಿರಂತರವಾಗಿ ಕಾರುಣ್ಯ ಆಶ್ರಮದ ಸೇವೆಯ ಜೊತೆಗಿರುತ್ತದೆ ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ದೇವ ಮುಂಡರಗಿ ರಾಜ್ಯಾದ್ಯಕ್ಷರು ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸಮಾಜ. ಬಸವರಾಜ ಹರವಿ ಜಿಲ್ಲಾಧ್ಯಕ್ಷರು ರಾಯಚೂರು. ನಿಜಗುಣ ಅಬ್ಬಿಗೇರಿ ಸಿಂಧನೂರು ಜಿಲ್ಲಾ ಪ್ರತಿನಿಧಿಗಳು. ಗದ್ದೆಪ್ಪ ಜಕ್ಕೇರಮಡು ಕಾರ್ಯಾಧ್ಯಕ್ಷರು. ಅಮರೇಶ ಕಾನಿಹಾಳ ಮಾಜಿ ಅಧ್ಯಕ್ಷರು ಹಡಪದ ಅಪ್ಪಣ್ಣ ಸಮಾಜ ಸಿಂಧನೂರು. ಅಮರೇಶ ಮಟ್ಟೂರು ಮುಖಂಡರು. ವೀರಭದ್ರಪ್ಪ ಮುಖಂಡರು. ರುದ್ರಪ್ಪ ಜಿಲ್ಲಾಧ್ಯಕ್ಷರು ಬಳ್ಳಾರಿ. ಹಾಗೂ ರಾಜ್ಯದ ಎಲ್ಲಾ ಜಿಲ್ಲಾಧ್ಯಕ್ಷರುಗಳು ಹಾಗೂ ತಾಲೂಕಾಧ್ಯಕ್ಷರುಗಳು ಮತ್ತು ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ.ಮರಿಯಪ್ಪ. ವಿದ್ಯಾಶ್ರೀ. ಜ್ಯೋತಿ. ಶರಣು ಸ್ವಾಮಿ.. ಬಸವ ಸ್ವಾಮಿ. ಹಾಗೂ ಹಡಪದ ಅಪ್ಪಣ್ಣ ಸಮಾಜದ ಹಲವಾರು ಗುರುಹಿರಿಯರಗಳು ಉಪಸ್ಥಿತರಿದ್ದರು.

ಅ. 31ರಂದು ಹರಿಹರದಲ್ಲಿ ರಾಜ್ಯಮಟ್ಟದ ಎಸ್‌ಎಸ್‌ಕೆ ಮಹಿಳಾ ಸಮಾವೇಶ

ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ರಾಜ್ಯ ಜಂಟಿ ಕಾರ್ಯದರ್ಶಿ ಶಶಿಕುಮಾರ್ ದಾನಿ ಕರೆ

❑ ನೈಜ್ಯ ದೆಸೆ ನ್ಯೂಸ್



ಕುಷ್ಟಗಿ: ಯಾವುದೇ ಸಮಾಜದಲ್ಲಿ ಮಹಿಳೆಯರು ಸಂಘಟಿತರಾದರೆ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯ ಎಂದು ಕರ್ನಾಟಕ ರಾಜ್ಯ ಎಸ್‌ಎಸ್‌ಕೆ ಸಮಾಜದ ನೂತನ ಜಂಟಿ ಕಾರ್ಯದರ್ಶಿ ಶಶಿಕುಮಾರ್ ದಾನಿ ಸಿಂಧನೂರು ಹೇಳಿದರು.ಪಟ್ಟಣದ ಶ್ರೀ ಅಂಭಾ ಭವಾನಿ ದೇವಸ್ಥಾನಕ್ಕೆ ಭಾನುವಾರ ಭೇಟಿ ನೀಡಿದ ಅವರು, ಅಕ್ಟೋಬರ್ 31ರಂದು ಹ-ರಿಹರದಲ್ಲಿ ರಾಜ್ಯ ಎಸ್‌ಎಸ್‌ಕೆ ಮಹಿಳಾ ಘಟಕದ ವತಿಯಿಂದ ಆಯೋಜಿಸಿರುವ ರಾಜ್ಯಮಟ್ಟದ ಮಹಿಳಾ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಮಾಜದ ಮಹಿಳೆಯರಿಗೆ ಕರೆ ನೀಡಿದರು.ಸಮಾವೇಶದಲ್ಲಿ ಮಹಿಳೆಯರ ಸಮಸ್ಯೆಗಳು, ಸಂಘಟನೆ ಹಾಗೂ ಜಾಗೃತಿ ಕುರಿತು ವಿಶೇಷ ಉಪನ್ಯಾಸಗಳು ನಡೆಯಲಿವೆ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ, ರಾಜ್ಯಾಧ್ಯಕ್ಷ ಶಶಿಕುಮಾರ್ ಮೆಹರವಾಡೆ, ಸಂಸದ ನಾರಾಯಣಸಾ ಬಾಂಡಗೆ ಹಾಗೂ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ರಾಜಶ್ರೀ ಜಡಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.ಮಹಿಳೆಯರ ಒಗ್ಗಟ್ಟು ಪ್ರದರ್ಶಿಸುವುದು, ಅವರಲ್ಲಿ ಸಂಘಟನಾ ಮನೋಭಾವ ಬೆಳೆಸುವುದು ಹಾಗೂ ಸಾಮಾಜಿಕ ಜಾಗೃತಿ ಮೂಡಿಸುವ ಉದ್ದೇಶದಿಂದ ಸಮಾವೇಶ ಆಯೋಜಿಸಲಾಗಿದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ರಾಜ್ಯಮಟ್ಟದ ಮಹಿಳಾ ಸಮಾವೇಶದ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು. ಬಳಿಕ ಎಸ್‌ಎಸ್‌ಕೆ ಸಮಾಜದ ರಾಜ್ಯ ಜಂಟಿ ಕಾರ್ಯದರ್ಶಿಯಾಗಿ ನೂತನವಾಗಿ ಆಯ್ಕೆಯಾದ ಶಶಿಕುಮಾರ್ ದಾನಿ ಹಾಗೂ ಅವರ ಪತ್ನಿಯನ್ನು ಸನ್ಮಾನಿಸಿ ಗೌರವಿಸಲಾಯಿತು.ದೇವಸ್ಥಾನಗಳ ಅಭಿವೃದ್ಧಿಗೆ ರಾಜ್ಯ ಸಮಿತಿ ನೆರವಾಗಲಿ: ರವೀಂದ್ರ ಬಾಕಳೆಕುಷ್ಟಗಿ ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ರವೀಂದ್ರ ಬಾಕಳೆ ಮಾತನಾಡಿ, ರಾಜ್ಯದ ವಿವಿಧೆಡೆ ಆರ್ಥಿಕ ಸಂಕಷ್ಟದಿಂದ ಅಪೂರ್ಣಗೊಂಡಿರುವ ಶ್ರೀ ಅಂಭಾ ಭವಾನಿ ದೇವಸ್ಥಾನಗಳ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ರಾಜ್ಯ ಸಮಿತಿ ಆರ್ಥಿಕ ನೆರವು ನೀಡಬೇಕು ಎಂದು ಮನವಿ ಮಾಡಿದರು.ಸಮಾಜವು ವಿವಿಧ ಪ್ರದೇಶಗಳಲ್ಲಿ ಆರ್ಥಿಕವಾಗಿ ಸಶಕ್ತವಾಗಿದ್ದು, ಅಂತಹ ಘಟಕಗಳು ಸಂಕಷ್ಟದಲ್ಲಿರುವ ಸಮಾಜದ ಘಟಕಗಳಿಗೆ ಸಹಕಾರ ನೀಡುವ ವಾತಾವರಣ ನಿರ್ಮಿಸಬೇಕು. ಈ ನಿಟ್ಟಿನಲ್ಲಿ ರಾಜ್ಯ ಸಮಿತಿ ಸೂಕ್ತ ಯೋಜನೆ ರೂಪಿಸಿದರೆ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಸಮಾಜದ ಗೌರವಾಧ್ಯಕ್ಷ ಪರಶುರಾಮ ನಿರಂಜನ, ಟ್ರಸ್ಟಿಗಳಾದ ಡಾ. ರವಿಕುಮಾರ್ ದಾನಿ, ವೆಂಕಟೇಶ ಕಾಟವಾ, ಕೇಶವ ಕಾಟವಾ, ವಿಠ್ಠಲ ದಲಬಂಜನ, ಶ್ರೀನಿವಾಸ ಬಾಕಳೆ, ಕಿರಣ ದಾನಿ, ಪ್ರಭಾಕರ ಸಿಂಗ್ರಿ, ಗಣಪತಿಸಾ, ಮಹಿಳಾ ಮಂಡಳಿಯ ಅಧ್ಯಕ್ಷೆ ಅನಿತಾಬಾಯಿ ಸಿಂಗ್ರಿ, ಅರುಣಾಬಾಯಿ ಮಿಸ್ಕಿನ್, ಹನಮಂತಬಾಯಿ ದಲಬಂಜನ, ಉಮಾ ದಾನಿ ಸೇರಿದಂತೆ ಸಮಾಜದ ಮುಖಂಡರು ಹಾಗೂ ಮಹಿಳೆಯರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ವಿರುದ್ಧದ 'ಸ್ಟಿಂಗ್' ಹಿಂದೆ ಸ್ವಪಕ್ಷೀಯರ ಕೈವಾಡ: ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪತನ ಖಚಿತ – ವರುಣಾ ಮುಖಂಡರ ಅಭಿಪ್ರಾಯ

❑ ನೈಜ್ಯ ದೆಸೆ ನ್ಯೂಸ್



ತಾಂಡವಪುರ ಅಕ್ಟೋಬರ್ 24 ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನ ವಿರುದ್ಧ ಮಾಡಿರುವ ಸ್ಟಿಂಗ್ ಆಪರೇಷನ್ ವಿಚಾರ ಭಾರಿ ಸದ್ದು ಮಾಡುತ್ತಿದ್ದು ಇದರ ನಡುವೆ ನೆನ್ನೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಸ್ಟಿಂಗ್ ಆಪರೇಷನ್ ನಡೆಸಿರುವ ಪವರ್ ಟಿವಿ ಎಂಡಿ ಹಾಗೂ ಕಾಂಗ್ರೆಸ್ ಪಕ್ಷದ ಮಹಿಳಾ ಕಾರ್ಯಕರ್ತ ಒಬ್ಬರು ಭಾಗಿಯಾಗಿ ಸಿದ್ದರಾಮಯ್ಯ ವಿರುದ್ಧ ಕುತಂತ್ರ ನಡೆಸಿರುವುದು ಬಹಿರಂಗವಾಗಿದೆ ಎಂದು ಹೇಳಿರುವ ಹಿನ್ನೆಲೆಯಲ್ಲಿ ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕೆರಳಿ ಕೆಂಡವಾಗಿದ್ದು ಇದರ ಸೂತ್ರದಾರ ಮೂಲ ವ್ಯಕ್ತಿ ಕಾಂಗ್ರೆಸ್ಸಿನವರೇ ಆದರೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭಾರಿ ಒಡತೆ ಬೀಳುವುದು ಗ್ಯಾರಂಟಿ ಎಂದು ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ನಂಜಯ್ಯ ಮಾಜಿ ಸದಸ್ಯ ಶಿವನಂಜು ರವರು ಸುದ್ದಿಗಾರರಿಗೆ ತಿಳಿಸಿದರು ಅವರು ನಂಜನಗೂಡು ತಾಲೂಕು ಚಿಕ್ಕಯ್ಯನ ಛತ್ರ ಹೋಬಳಿ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಕೆಂಪಿಸಿದ್ರ ಹುಂಡಿ ಗ್ರಾಮದಲ್ಲಿ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಸಿದ್ದರಾಮಯ್ಯನವರು ಎರಡು ಬಾರಿ ಮುಖ್ಯಮಂತ್ರಿ ಆಗಿ ಎಂಟು ವರ್ಷಗಳ ಕಾಲ ಸುಧೀರ್ಘ ಮುಖ್ಯಮಂತ್ರಿಯಾಗಿ ರಾಜ್ಯದ ಜನರ ಏಳಿಗೆಗೆ ಶ್ರಮಿಸಿದ್ದಾರೆ ಅಲ್ಲದೆ ಅವರು ನಡೆದು ಬಂದ ದಾರಿ ಯಾರಿಗೂ ಕೆಟ್ಟದ್ದನ್ನು ಬಯಸಿದಂತಹ ಸಿದ್ದರಾಮಯ್ಯನವರು ಸಾಮಾಜಿಕ ನ್ಯಾಯದ ಅಡಿಯಲ್ಲಿ ತಮ್ಮ ರಾಜ-ಕೀಯ ಜೀವನವನ್ನು ನಡೆಸಿಕೊಂಡು ಬಂದಂತ ಮಹಾ ನಾಯಕ ಅವರ ವಿರುದ್ಧ ಇಂತಹ ಕುತಂತ್ರ ರಾಜಕಾರಣ ಮತ್ತು ಅವರ ವ್ಯಕ್ತಿತ್ವಕ್ಕೆ ಅವರ ಮುಖಕ್ಕೆ ಮಸಿ ಬೆಳೆಯುವಂತಹ ಮತ್ತು ಅವರ ಶಕ್ತಿಯನ್ನು ಹೊಂದಿಸುವಂತಹ ಕುಚೋದ್ಯ ಪಿತೂರಿ ನಡೆಸಿರುವುದು ಖಂಡನೀಯವಾದದ್ದು ಈ ಒಂದು ಸ್ಟಿಂಗ್ ಆಪರೇಷನ್ ಅಲ್ಲಿ ಈಗ ಸಿಕ್ಕಿರುವ ಮಾಹಿತಿ ಪ್ರಕಾರ ಒಬ್ಬರು ಕಾಂಗ್ರೆಸ್ ಕಾರ್ಯಕರ್ತ ಇನ್ನೊಬ್ಬರು ಟಿವಿ ಮಾಧ್ಯಮದವರು ಎಂದು ಗೊತ್ತಾಗಿದ್ದು ಇದರ ಹಿಂದಿನ ಸೂತ್ರದಾರ ಮೂಲ ವ್ಯಕ್ತಿ ಕಾಂಗ್ರೆಸ್ಸಿನವರೇ ಎಂದು ಗೊತ್ತಾದರೆ ಮಾತ್ರ ರಾಜ್ಯದಲ್ಲಿ ದೇಶದಲ್ಲಿಯೇ ಕಾಂಗ್ರೆಸ್ ಪಕ್ಷಕ್ಕೆ ಉಳಿಗಾಲವಿಲ್ಲ ಕಾಂಗ್ರೆಸ್ ಪಕ್ಷವು ಗೆಲ್ಲುವುದಿಲ್ಲ ಎಂದು ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ನಂಜಯ್ಯ ಹಾಗೂ ಮಾಜಿ ಸದಸ್ಯ ಶಿವಣ್ಣ ರವರು ಹಾಗೂ ಕಾಂಗ್ರೆಸ್ ಮುಖಂಡರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಈ ಸ್ಟಿಂಗ್ ಆಪರೇಷನ್ ಮಾಡಿ ಸುತ್ತಿರುವ ವಿರುದ್ಧ ಆಕ್ರೋಶ್ ವ್ಯಕ್ತಪಡಿಸಿದರು

ನೇಮಕಾತಿ ಪ್ರಕಟಣೆ

ಕರ್ನಾಟಕ ಶಿಕ್ಷಣ ಇಲಾಖೆ – 15,000 ಶಿಕ್ಷಕರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ. ಕರ್ನಾಟಕ ಶಿಕ್ಷಣ ಇಲಾಖೆ ನೇಮಕಾತಿ 2026: 15,000 ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಶಿಕ್ಷಣ ಇಲಾಖೆಯು 15,000 ಶಿಕ್ಷಕರ ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿದೆ. ಕರ್ನಾಟಕದಲ್ಲಿ ವೃತ್ತಿಜೀವನವನ್ನು ರೂಪಿಸಿಕೊಳ್ಳಲು ಬಯಸುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಉಖಖಿಖ–2026 – PST/GPT/CST/HST/PE-Grade-I/PE-Grade-II ಶಿಕ್ಷಕರ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 2026ರ ನವೆಂಬರ್ 16ರ ವರೆಗೆ ವಿಸ್ತರಿಸಲಾಗಿದೆ. ಸಂಸ್ಥೆಯ ಹೆಸರು: ಕರ್ನಾಟಕ ಶಿಕ್ಷಣ ಇಲಾಖೆ ಹುದ್ದೆಗಳ ಸಂಖ್ಯೆ: 15,000 ಉದ್ಯೋಗ ಸ್ಥಳ: ಕರ್ನಾಟಕ ಹುದ್ದೆಯ ಹೆಸರು: ಶಿಕ್ಷಕರು ವೇತನ: ತಿಂಗಳಿಗೆ ರೂ. 44,425 ರಿಂದ 99,400/– ವರೆಗೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 2026ರ ನವೆಂಬರ್ 16. ಅಧಿಕೃತ ಜಾಲತಾಣ: schooleducation.karnataka.gov.in

ಚುಟುಕುಗಳು(ಪರಿವರ್ತನೆ)

❑ ನೈಜ್ಯ ದೆಸೆ ನ್ಯೂಸ್

ಕಾಡ ಹಾದಿಯಲಿ ಕಾಯುತ ನಿಂತ ರತ್ನಾಕರನು,
ನಾರದರ ನುಡಿಯಲಿ ಕಂಡನು ಸತ್ಯದ ದರ್ಶನನು;
ಪಾಪದ ಮೂಟೆಯ ಸರಿಸಿ ಜ್ಞಾನದ ಹಾದಿಗೆ ಬಂದನು,
ದರೋಡೆಕೋರನು ಕರಗಿ ಪರಮ ಹಂಸನಾದನು!

ವಾಲ್ಮೀಕಿ ನಾಮೋದಯ

ರಾಮ ನಾಮದ ಧ್ಯಾನದಲಿ ತನುವನೇ ಮರೆತನು,
ದೇಹದ ಸುತ್ತಲೂ ಹುತ್ತವು ಬೆಳೆಯಲು ಬಿಟ್ಟನು;
ಹುತ್ತದ ಒಳಗಿಂದ ಮರುಜನ್ಮವ ಪಡೆದನು,
'ವಾಲ್ಮೀಕಿ' ಎಂಬ ಹೆಸರಿನಿಂದ ಜಗದಲಿ ಬೆಳಗಿದನು!

ಆದಿಕಾವ್ಯದ ಸೃಷ್ಟಿ

ಕ್ರೌಂಚ ಹಕ್ಕಿಯ ಆಕ್ರಂದನಕೆ ಕರಗಿತು ಋಷಿಯ ಮನ,
ಅಲ್ಲಿಯೇ ಮೊದಲೆದ್ದಿತು ಸಂಸ್ಕೃತದ ಶ್ಲೋಕದ ಗಾನ;
ಕರುಣೆಯ ಕಣ್ಣೀರಲಿ ತೊಯ್ದ ಜಗದ ಮೊದಲ ಕವನ,
ಅದರಿಂದಲೇ ಜನ್ಮತಾಳಿತು ಪಾವನ ಶ್ರೀರಾಮಾಯಣ!

ಕಾವ್ಯದ ಬೆಳಕು


ಲವ ಕುಶರಿಗೆ ಅಕ್ಷರ ಕಲಿಸಿದ ಆಶ್ರಮದ ಗುರು ಇವನು,
ಸೀತೆಯ ಕಣ್ಣೀರ ಒರೆಸಿದ ಕರುಣೆಯ ಕಡಲು ಇವನು;
ಯುಗ ಯುಗಗಳಿಗೂ ಅಳಿಯದ ಕಾವ್ಯದ ಬೆಳಕ ತಂದವನು,
ನಮ್ಮ ಮನದ ಕತ್ತಲ ಅಳಿಸುವ ಆದಿಕವಿ ಇವನು!



–ಬೀರಪ್ಪ ಶಂಭೋಜಿ
ಸಿಂಧನೂರು

ಚಿಂಚರಕಿ– ಅದ್ದೂರಿಯಾಗಿ ಜರುಗಿದ ರಥೋತ್ಸವ

❑ ನೈಜ್ಯ ದೆಸೆ ನ್ಯೂಸ್



ಕವಿತಾಳ ಪಟ್ಟಣ ಸಮೀಪದಚಿಂಚರಕಿ ಗ್ರಾಮದಲ್ಲಿ ಶರನ್ನವರಾತ್ರಿ ಪ್ರಯುಕ್ತ ಹಮ್ಮಿಕೊಂಡಿದ್ದ ಸಿದ್ದಪರ್ವತ ಅಂಭಾದೇವಿಯ 84ನೇ ವರ್ಷದ ಪುರಾಣ ಪ್ರವಚನ ಹಾಗೂ 14ನೇ ವರ್ಷದ ರಥ–ೋತ್ಸವ ಕಾರ್ಯಕ್ರಮವು ಇಂದು ಅದ್ದೂರಿಯಾಗಿ ಜರುಗಿ–ತು.ಬ್ರಾಹ್ಮಿ ಮೂಹೂರ್ತದಿಂದಲೇ ದೇವಿಗೆ ಮಹಾರುದ್ರಾಭಿಷೇಕ, ಕುಂಕುಮಾರ್ಚನೆ ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ನಡೆದವು ಸಂಜೆ ಭಾಜಾ ಭಜಂತ್ರಿ ಯೊಂದಿಗೆ ಪಲ್ಲಕಿ ಸೇವೆ, ನಂದಿಕೋಲು ಕುಣಿತ, ಪುರವಂತಿಕೆ ಸೇವೆಯೊಂದಿಗೆ ದೇವಿಯ ಮೂರ್ತಿ ಮೆರವಣಿಗೆ ಜರುಗಿತು, ಸಂಜೆ ರಥೋತ್ಸವವವು ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಸಡಗರ ಸಂಭ್ರಮದೊಂದಿಗೆ ಅದ್ದೂ–ರಿಯಾಗಿ ಜರುಗಿತು.ಧಾರ್ಮಿಕ ಸಭೆಯನ್ನು ಹಮ್ಮಿಕೊಳ್ಳಲಾಗಿ–ತ್ತು ಈ ಕಾರ್ಯಕ್ರಮಗಳ ಸಾನಿದ್ಯವನ್ನು ನವಲಕಲ್ ಅಭಿನವ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು, ಗಜದಂಡ ಶ್ರೀಗಳು, ಅಮರಗುಂಡ ಶ್ರೀ ಗಳು ವಹಿಸಿದ್ದರು.

ಸಗರ ಶರೀಫ್‌ನಲ್ಲಿ ಚಿಟಗುಪ್ಪ ನಾನಾ ಹಜರತ್ ಖಲೀಫಾ ನೇತೃತ್ವದಲ್ಲಿ ಮೂರು ದಿನಗಳ ನಿಯಾಜ್ ಶರೀಫ್, ಬೃಹತ್ ಲಂಗರ್ ಸಂಪನ್ನ

❑ ನೈಜ್ಯ ದೆಸೆ ನ್ಯೂಸ್



ಸಗರ ಶರೀಫ್,ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಸಗರ ಶರೀಫ್‌ನಲ್ಲಿರುವ ಹಜರತ್ ಶೇಖ್ ಸೈಯದ್ ಶಾ ಮೊಹಮ್ಮದ್ ಮಹಮೂದ್ ಫಾರೂಕಿ ಅಲ್ ಮರೂಫ್ ಹಜರತ್ ಸೂಫಿ ಸರ್ಮದ್ ರಹ್ಮತುಲ್ಲಾಹಿ ಅಲೈಹಿ (ಸಾನಿ–ಎ–ಕರ್ಬಲಾ) ಅವರ ದರ್ಗಾ ಶರೀಫ್‌ನಲ್ಲಿ ಉರುಸ್ ಕಾರ್ಯಕ್ರಮದ ಬಳಿಕ ಮೂರು ದಿನಗಳ ಕಾಲ ಆಯೋಜಿಸಲಾಗಿದ್ದ ನಿಯಾಜ್ ಶರೀಫ್ ಹಾಗೂ ಬೃಹತ್ ರುಹಾನಿ ಲಂಗರ್ ಕಾರ್ಯಕ್ರಮವು ಶ್ರದ್ಧೆ, ಭಕ್ತಿ ಮತ್ತು ಸೌಹಾರ್ದತೆಯ ವಾತಾವರಣದಲ್ಲಿ ಯಶಸ್ವಿಯಾಗಿ ಸಂಪನ್ನಗೊಂಡಿತು.ಬೀದರ್ ಜಿಲ್ಲೆಯ ಚಿಟಗುಪ್ಪದ ಸಯ್ಯದ್ ಶಂಶುದ್ದಿನ್ ಶಾ ಖಾದ್ರಿ ಎಜಾಜಿ ಅಲ್ ಮರೂಫ್ ನಾನಾ ಹಜರತ್ ರಹಮತುಲ್ಲಾ ಅಲೈಹಿ ಚಿಟಗುಪ್ಪ ಶರೀಫ್ ಅವರ ಆಧ್ಯಾತ್ಮಿಕ ಮಾರ್ಗದರ್ಶನದಲ್ಲಿ ಈ ಧಾರ್ಮಿಕ ಕಾರ್ಯಕ್ರಮವನ್ನು ಪ್ರತಿ ವರ್ಷ ಆಯೋಜಿಸಲಾಗುತ್ತದೆ. ಶಹಾಪುರ ತಾಲೂಕಿನ ಸಗರ ಶರೀಫ್‌ನ ಸೂಫಿ ಸರ್ಮದ್ ದರ್ಗಾದಲ್ಲಿ ನಡೆಯುವ ಈ ಕಾರ್ಯಕ್ರಮವು ಧಾರ್ಮಿಕ ಭಕ್ತಿ ಹಾಗೂ ಸೇವಾ ಮನೋಭಾವಕ್ಕೆ ಸಾಕ್ಷಿಯಾಯಿತು.ಪ್ರಸ್ತುತ ಸುರಪುರ ತಾಲೂಕಿನಲ್ಲಿ ನೆಲೆಸಿರುವ ಹಜರತ್ ಸೈಯದ್ ಇರ್ಫಾನ್ ಅಲಿ ಶಾ ಖಾದ್ರಿ ಅಜಾಜಿ (ಅಲ್ ಮರೂಫ್ ಸೈಯದ್ ಆಬಿದ್ ಅಹ್ಮದ್ ಸಾಬ್) ಅವರ ನೇತೃತ್ವದಲ್ಲಿ ಹಾಗೂ ಹಜರತ್ ನಾನಾ ಜಾನ್ ಅವರ ಆಧ್ಯಾತ್ಮಿಕ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಜರುಗಿತು. ಹಜರತ್ ನಾನಾ ಜಾನ್ ಅವರ ಖಲೀಫರು, ಮುರೀದರು, ಅಭಿಮಾನಿಗಳು ಮತ್ತು ಸಮಿತಿಯ ಪದಾಧಿಕಾರಿಗಳು ಒಗ್ಗಟ್ಟಿನಿಂದ ಶ್ರಮಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.ಸಾವಿರಾರು ಭಕ್ತರಿಗೆ ಬೃಹತ್ ಲಂಗರ್ ಸೇವೆ ಮೂರು ದಿನಗಳ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದ ಬೃಹತ್ ರುಹಾನಿ ಲಂಗರ್‌ನಲ್ಲಿ ಸುಮಾರು 15ರಿಂದ 20 ಕುರಿಗಳನ್ನು ಕುರ್ಬಾನಿ ಮಾಡಿ, ಸಿದ್ಧಪಡಿಸಿದ ಆಹಾರ ಹಾಗೂ ತಬರುಕ್ ಅನ್ನು ಆಗಮಿಸಿದ ಸಾವಿರಾರು ಭಕ್ತರು ಮತ್ತು ಅತಿಥಿಗಳಿಗೆ ವಿತರಿಸಲಾಯಿತು. ಜಾತಿ, ಧರ್ಮ ಹಾಗೂ ಆರ್ಥಿಕ ಸ್ಥಿತಿಯ ಭೇದವಿಲ್ಲದೆ ಬಡವರು, ಶ್ರೀಮಂತರು ಸೇ–ರಿದಂತೆ ವಿವಿಧ ಸಮುದಾಯಗಳ ಜನರು ಒಂದೇ ಸಾಲಿನಲ್ಲಿ ಕುಳಿತು ಲಂಗರ್ ಸ್ವೀಕರಿಸಿದರು. ಈ ಮೂಲಕ ಅನ್ನದಾನ ಸೇವೆಯ ಮಹತ್ವವನ್ನು ಸಾರುವುದರ ಜತೆಗೆ ಮಾನವೀಯತೆ, ಪ್ರೀತಿ, ಸಹೋದರತ್ವ ಮತ್ತು ಸಾಮಾಜಿಕ ಸೌಹಾರ್ದತೆಯ ಸಂದೇಶವನ್ನು ಜನರಿಗೆ ತಲುಪಿಸಲಾಯಿತು. ಹಜರತ್ ಜಹರುದ್ದೀನ್ ಪಾಶಾ ಖಾದ್ರಿ ಸಾಬ್ ಭೇಟಿ ಈ ಸಂದರ್ಭದಲ್ಲಿ ದೇವದುರ್ಗದ ಹಜರತ್ ಜಹರುದ್ದೀನ್ ಪಾಶಾ ಖಾದ್ರಿ ಸಾಬ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹಜರತ್ ಸೈಯದ್ ಇರ್ಫಾನ್ ಅಲಿ ಶಾ ಖಾದ್ರಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.ಹಜರತ್ ನಾನಾ ಜಾನ್ ಅವರ ಆಧ್ಯಾತ್ಮಿಕ ಮಾರ್ಗದರ್ಶನ ಮತ್ತು ಬೋಧನೆಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಹಜರತ್ ಸೈಯದ್ ಇರ್ಫಾನ್ ಅಲಿ ಶಾ ಖಾದ್ರಿ ಅವರ ಧಾರ್ಮಿಕ ಹಾಗೂ ಸಮಾಜಸೇವಾ ಕಾರ್ಯಗಳನ್ನು ಶ್ಲಾಘಿಸಿದರು. ಸಮಾಜದಲ್ಲಿ ಮಾನವೀಯ ಮೌಲ್ಯಗಳು, ಪರಸ್ಪರ ವಿಶ್ವಾಸ ಮತ್ತು ಸಹೋದರತ್ವವನ್ನು ಬೆಳೆಸುವ ಪ್ರಯತ್ನಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಹಕರಿಸಿದ ಎಲ್ಲ–ರಿಗೂ ಡಾ. ಸೈಯದ್ ಮೀರ್ ಮಹಮೂದ್ ಅಲಿ ಸಾಬ್ ಕೃತಜ್ಞತೆ ಮೂರು ದಿನಗಳ ನಿಯಾಜ್ ಶರೀಫ್ ಕಾರ್ಯಕ್ರಮದ ಸಮಾರೋಪದ ಸಂದರ್ಭದಲ್ಲಿ ಹಜರತ್ ಸೈಯದ್ ಇರ್ಫಾನ್ ಅಲಿ ಶಾ ಖಾದ್ರಿ ಅವರ ಪುತ್ರರಾದ ಹಜರತ್ ಡಾ. ಸೈಯದ್ ಮೀರ್ ಮಹಮೂದ್ ಅಲಿ ಸಾಬ್ (ಸುರಪುರ) ಅವರು ಮಾತನಾಡಿ, ದೂರದೂರುಗಳಿಂದ ಆಗಮಿಸಿದ ಮುಸಾಫಿರರು, ಅತಿಥಿಗಳು, ಹಜರತ್ ನಾನಾ ಜಾನ್ ಅವರ ಖಲೀಫರು, ಮುರೀದರು, ಅಭಿಮಾನಿಗಳು ಹಾಗೂ ಸಮಿತಿಯ ಎಲ್ಲ ಪದಾಧಿಕಾ–ರಿಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು.ಶಹಾಪುರ ಮತ್ತು ಸುರಪುರ ತಾಲೂಕುಗಳಲ್ಲಿ ನಡೆಯುತ್ತಿರುವ ಧಾರ್ಮಿಕ ಹಾಗೂ ಸಮಾಜಸೇವಾ ಕಾರ್ಯಗಳಿಗೆ ಹಜರತ್ ನಾನಾ ಜಾನ್ ಅವರ ಪವಿತ್ರ ಆದ–್ಯಾತ್ಮಿಕ ಮಾರ್ಗದರ್ಶನ ಮತ್ತು ತಮ್ಮ ವಾಲಿದ್ ಸಾಬ್ ಹಜರತ್ ಸೈಯದ್ ಇರ್ಫಾನ್ ಅಲಿ ಶಾ ಖಾದ್ರಿ ಅವರ ನಿರಂತರ ದುಆ, ಪರಿಶ್ರಮ ಹಾಗೂ ಸೇವಾಭಾವ ಪ್ರೇರಣೆಯಾಗಿವೆ ಎಂದು ತಿಳಿಸಿದರು.ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಶ್ರಮಿಸಿದ ಪ್ರತಿಯೊಬ್ಬ–ರಿಗೂ ವಿಶೇಷ ಕೃತಜ್ಞತೆ ಸಲ್ಲಿಸಿದ ಅವರು, ಎಲ್ಲರ ಪ್ರೀತಿ, ಸಹಕಾರ ಮತ್ತು ಸಕ್ರಿಯ ಭಾಗವಹಿಸುವಿಕೆಯೇ ಕಾರ್ಯಕ್ರಮದ ಯಶಸ್ಸಿಗೆ ಪ್ರಮುಖ ಕಾರಣವಾಗಿದೆ ಎಂದು ಹೇಳಿದರು. ಸೌಹಾರ್ದತೆಯ ಸಂದೇಶ ಸಾರಿದ ಪವಿತ್ರ ಕಾರ್ಯಕ್ರಮ ಸಗರ ಶರೀಫ್‌ನಲ್ಲಿ ಉರುಸ್ ಬಳಿಕ ನಡೆದ ಮೂರು ದಿನಗಳ ನಿಯಾಜ್ ಶರೀಫ್ ಹಾಗೂ ಬೃಹತ್ ಲಂಗರ್ ಕಾರ್ಯಕ್ರಮವು ಧಾರ್ಮಿಕ ಭಕ್ತಿ, ಅನ್ನದಾನ, ಅತಿಥಿ ಸತ್ಕಾರ ಮತ್ತು ಸಾಮಾಜಿಕ ಏಕತೆಯ ಪ್ರತೀಕವಾಗಿ ಮೂಡಿಬಂತು.ವಿವಿಧ ಸಮುದಾಯಗಳ ಜನರು ಒಟ್ಟಾಗಿ ಪಾಲ್ಗೊಂಡು ಪರಸ್ಪರ ಪ್ರೀತಿ, ವಿಶ್ವಾಸ, ಸಹೋದರತ್ವ ಹಾಗೂ ಸೌಹಾರ್ದತೆಯ ಸಂದೇಶವನ್ನು ಸಾರಿದರು. ಧಾರ್ಮಿಕ ಆಚರಣೆಯೊಂದಿಗೆ ಮಾನವೀಯ ಸೇವೆಗೂ ಆದ್ಯತೆ ನೀಡಿದ ಈ ಕಾರ್ಯಕ್ರಮವು ಭಕ್ತರ ಗಮನ ಸೆಳೆಯಿತು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ**

ರೈತ–ಕೂಲಿಕಾರ್ಮಿಕರ ಎರಡನೇ ದಿನದ ಪಾದಯಾತ್ರೆಗೆ ಮುರಾನಪೂರ ಬಳಿ ಶಾಸಕಿ ಕರೆಮ್ಮ ಜಿ. ನಾಯಕ ಬೆಂಬಲ

❑ ನೈಜ್ಯ ದೆಸೆ ನ್ಯೂಸ್

ಮುರಾನಪೂರ, ರೈತರು ಮತ್ತು ಕೃಷಿ ಕೂಲಿಕಾರ್ಮಿಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದೇವದುರ್ಗದಿಂದ ರಾಯಚೂರು ಜಿಲ್ಲಾಧಿಕಾರಿಗಳ ಕಚೇರಿವರೆಗೆ ನಡೆಯುತ್ತಿರುವ ಪಾದಯಾತ್ರೆಯ ಎರಡನೇ ದಿನವಾದ ಶನಿವಾರ, ಮುರಾನಪೂರ ಗ್ರಾಮದ ಬಳಿ ಶಾಸಕಿ ಕರೆಮ್ಮ ಜಿ. ನಾಯಕ ಅವರು ಹೋರಾಟಗಾರರನ್ನು ಭೇಟಿ ಮಾಡಿ ಬೆಂಬಲ ವ್ಯಕ್ತಪಡಿಸಿದರು.ಈ ಸಂದರ್ಭದಲ್ಲಿ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಹೋರಾಟಗಾರರನ್ನು ಸನ್ಮಾನಿಸಿದ ಶಾಸಕರು, ಅವರಿಗೆ ಹಣ್ಣುಹಂಪಲು ಮತ್ತು ನೀರು ನೀಡಿ ಶುಭ ಹಾರೈಸಿದರು. ಅಲ್ಲದೆ, ಹೋರಾಟಕ್ಕೆ ದೇಣಿಗೆ ನೀಡಿ ತಮ್ಮ ಬೆಂಬಲ ಸೂಚಿಸಿದರು.



ಅಕ್ಟೋಬರ್ 27ರಂದು ರಾಯಚೂರು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಹಮ್ಮಿಕೊಳ್ಳಲಾಗಿರುವ ಬೃಹತ್ ಪ್ರತಿಭಟನೆಯ ಕುರಿತು ಪ್ರಾಂತ ರೈತ ಸಂಘಟನೆಯ ತಾಲೂಕು ಕಾರ್ಯದರ್ಶಿ ಮೌನೇಶ ಜಾಲಹಳ್ಳಿ ಅವರು ಶಾಸಕರಿಗೆ ಮಾಹಿತಿ ನೀಡಿದರು. ರೈತರು ಮತ್ತು ಕೃಷಿ ಕೂಲಿಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಪಾದಯಾತ್ರೆಯ ಉದ್ದೇಶವನ್ನು ವಿವ–ರಿಸಿದರು.ಈ ವೇಳೆ ಸಂಘಟನೆಗಳ ಮುಖಂಡರು, ನಾರಾಯಣಪುರ ಬಲದಂಡೆ ಕಾಲುವೆಗೆ ನವೆಂಬರ್ ಅಂತ್ಯದವರೆಗೆ ನೀರು ಹರಿಸುವುದು, ವಿದ್ಯುತ್ ಸಮಸ್ಯೆ ಪರಿಹರಿಸುವುದು, ವಸತಿ ನಿವೇಶನಗಳನ್ನು ಒದಗಿಸುವುದು ಹಾಗೂ ಭೂಮಿಯ ಹಕ್ಕು ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಶಾಸಕರ ಗಮನಕ್ಕೆ ತಂದರು.ಇದಕ್ಕೆ ಪ್ರತಿಕ್ರಿಯಿಸಿದ ಶಾಸಕಿ ಕರೆಮ್ಮ ಜಿ. ನಾಯಕ ಅವರು, ನಾರಾಯಣಪುರ ಬಲದಂಡೆ ಕಾಲುವೆಯ ನೀರಾವರಿ ಸಮಸ್ಯೆಯನ್ನು ಈಗಾಗಲೇ ಸರ್ಕಾರದ ಗಮನಕ್ಕೆ ತರಲಾಗಿದೆ. ಸ್ಥಳೀಯವಾಗಿ ರೈತರು ಮತ್ತು ಕೃಷಿ ಕೂಲಿಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ಪರಿಹಾರ ಕಲ್ಪಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.ಪಾದಯಾತ್ರೆಗೆ ಶುಭ ಹಾರೈಸಿದ ಶಾಸಕರಿಗೆ ಪ್ರಾಂತ ರೈತ ಸಂಘಟನೆ, ಕೃಷಿ ಕೂಲಿಕಾರ್ಮಿಕರ ಸಂಘಟನೆಗಳ ಮುಖಂಡರು ಹಾಗೂ ರೈತರ ಪರವಾಗಿ ಧನ್ಯವಾದಗಳನ್ನು ಸಲ್ಲಿಸಲಾಯಿತು.ಈ ಸಂದರ್ಭದಲ್ಲಿ ಮಹಾಲಿಂಗ ದೊಡ್ಡಮನಿ, ಸಂತೋಷ ತ್ಯಾಪ್ಲಿ, ಬಸವರಾಜ ಲಿಂಗದಹಳ್ಳಿ, ಶಿವರಾಜ ನಡಿಗೇರ್, ಚಂದ್ರಶೇಖರ ಕುನಿಗುಂದಿ, ರಂಗನಾಥ ಬುಂಕಲದೊಡ್ಡಿ, ಮಾನಪ್ಪ ಲಿಂಗದಹಳ್ಳಿ, ಸುರೇಶಗೌಡ, ತಮ್ಮಣ್ಣ, ನರೇಶ, ಅಂಬ್ರೇಶ, ರಮೇಶ, ಗಂಗಪ್ಪ, ಗೌಡಪ್ಪ ಹಾಗೂ ಶರಣಬಸವ ಸೇ–ರಿದಂತೆ ಇತರರು ಉಪಸ್ಥಿತರಿದ್ದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

ಅಕ್ಟೋಬರ್ 30ರಂದು ಸಿಂಧನೂರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ: ಸಿದ್ಧತೆಗಳ ಕುರಿತು ಶಾಸಕ ಹಂಪನಗೌಡ ಬಾದರ್ಲಿ ಚರ್ಚೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಅಕ್ಟೋಬರ್ 30, 2026ರಂದು ಸಿಂಧನೂ–ರಿಗೆ ಆಗಮಿಸಲಿರುವ ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಅವರು ಇಂದು ಬೆಂಗಳೂರಿನಲ್ಲಿರುವ ಅವರ ನಿವಾಸದಲ್ಲಿ ಭೇಟಿಯಾಗಿ, ಕಾರ್ಯಕ್ರಮದ ಸಿದ್ಧತೆಗಳ



ಕುರಿತು ಚರ್ಚಿಸಿದರು.ಮುಖ್ಯಮಂತ್ರಿಗಳ ಭೇಟಿಯ ಹಿನ್ನೆಲೆಯಲ್ಲಿ ಸಿಂಧನೂರಿನಲ್ಲಿ ನಡೆಯಲಿರುವ ಕಾರ್ಯಕ್ರಮಗಳ ಯಶಸ್ವಿ ಆಯೋಜನೆ, ಅಗತ್ಯ ವ್ಯವಸ್ಥೆಗಳು, ವೇದಿಕೆ ಸಿದ್ಧತೆ ಹಾಗೂ ಇತರ ಪೂರ್ವಸಿದ್ಧತಾ ಕಾರ್ಯಗಳ ಕುರಿತು ಸಮಾಲೋಚನೆ ನಡೆಸಲಾಯಿತು.ಕಾರ್ಯಕ್ರಮವನ್ನು ಸುಸೂತ್ರವಾಗಿ ನಡೆಸಲು ಕೈಗೊಳ್ಳಬೇಕಾದ ಕ್ರಮಗಳು ಮತ್ತು ವಿವಿಧ ವ್ಯವಸ್ಥೆಗಳ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದ ಶಾಸಕ ಹಂಪನಗೌಡ ಬಾದರ್ಲಿ ಅವರು, ಕಾರ್ಯಕ್ರಮದ ಸಿದ್ಧತೆಗಳ ಕುರಿತು ಮಾಹಿತಿ ಹಂಚಿಕೊಂಡರು.ಮುಖ್ಯಮಂತ್ರಿಗಳ ಸಿಂಧನೂರು ಭೇಟಿಯ ಹಿನ್ನೆಲೆಯಲ್ಲಿ ಸ್ಥಳೀಯ ಮಟ್ಟದಲ್ಲಿ ಕಾರ್ಯಕ್ರಮದ ಆಯೋಜನೆಗೆ ಸಂಬಂಧಿಸಿದ ಸಿದ್ಧತೆಗಳಿಗೆ ಆದ್ಯತೆ ನೀಡಲಾಗುತ್ತಿದೆ.

ಅವೈಜ್ಞಾನಿಕ ಅಮೃತ ಯೋಜನೆ ಕಾಮಗಾರಿ : ಕರಡಕಲ್‌ನಲ್ಲಿ ಬಡ ಕುಟುಂಬದ ಮನೆ ಕುಸಿಯುವ ಆತಂಕ

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು : ಅ 26 –ತಾಲೂಕಿನ ಕರಡಕಲ್ ಗ್ರಾಮದ ವಾರ್ಡ್ ನಂ.1 ರಲ್ಲಿ ಅಮೃತ ಯೋಜನೆಯ ಅವೈಜ್ಞಾನಿಕ ಕಾಮಗಾರಿಯಿಂದ ಬಡ ಕುಟುಂಬದ ಮನೆಯೊಂದು ಯಾವುದೇ ಕ್ಷಣದಲ್ಲಿ ಕುಸಿದು ಬೀಳುವ ಹಂತ ತಲುಪಿದ್ದು, ಕುಟುಂಬಸ್ಥರು ಆತಂಕದಲ್ಲಿ ದಿನ ದೂಡುವಂತಾಗಿದೆ. ಗ್ರಾಮದ ನಿವಾಸಿ ಮುತ್ತಪ್ಪ ಗುಡುಗುಂಟ ಮಾದಿಗ ಅವರ ಮನೆಯ ತಳಪಾಯ ಕುಸಿದು ಗೋಡೆಗಳಲ್ಲಿ ಆಳವಾದ ಬಿರುಕುಗಳು ಮೂಡಿವೆ. ಮನೆಯ ಒಂದು ಭಾಗ ಈಗಾಗಲೇ ಕುಸಿದಿದ್ದು, ಇಡೀ ಮನೆ ವಾಸಕ್ಕೆ ಯೋಗ್ಯವಿಲ್ಲದಂತಾಗಿದೆ. ಮನೆಯ ಗೋಡೆ ಬೀಳದಂತೆ ಅಲ್ಲಲ್ಲಿ ಕಬ್ಬಿಣದ ಪೈಪಗಳ ಮೂಲಕ ತಡೆ ಇಡಿದಿದ್ದಾರೆ ಏನಿದು ಘಟನೆ?ಕರಡಕಲ್ ಗ್ರಾಮದಲ್ಲಿ ಈ ಹಿಂದೆ ಜಲಧಾರೆ ಯೋಜನೆಯಡಿ ಕಾಮಗಾರಿ ನಡೆಸಲಾಗಿತ್ತು. ಅದೇ ಸ್ಥಳದಲ್ಲಿ ಮತ್ತೆ ಅಮೃತ ಯೋಜನೆಯಡಿ ಕಾಮಗಾರಿ ಕೈಗೊಳ್ಳಲಾಗಿದೆ. ಪದೇ ಪದೇ ಆಳವಾದ ತಗ್ಗುಗಳನ್ನು ತೋಡಿ ಅರ್ಧಂಬರ್ಧ ಮುಚ್ಚಲಾಗುತ್ತಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.ಕಾಮಗಾರಿಗೆ ಬಳಸುವ ವೈಬ್ರೇಟರ್ ಯಂತ್ರ ಹಾಗೂ ದೊಡ್ಡ



ಹಿಟಾಚಿ ಯಂತ್ರಗಳ ಓಡಾಟದಿಂದ ತೀವ್ರ ಕಂಪನ ಉಂಟಾಗಿದ್ದು ಇದರಿಂದ ಕೇವಲ 2 ರಿಂದ 3 ಅಡಿ ಆಳದಲ್ಲಿದ್ದ ಪುರಸಭೆಯ ಕುಡಿಯುವ ನೀರಿನ ಪೈಪ್‌ಲೈನ್ ಒಡೆದು ಹೋಗಿದೆ.ಪೈಪ್ ಒಡೆದ ಪರಿಣಾಮ ದಿನನಿತ್ಯ ಸರಬರಾಜಾಗುವ ಕುಡಿಯುವ ನೀರು ನೇರವಾಗಿ ಮನೆಗಳ ಅಡಿಪಾಯಕ್ಕೆ ನುಗ್ಗುತ್ತಿದೆ. ಇದ–ರಿಂದ ಮನೆಗಳು ಸದಾ ತೇವಗೊಂಡು ಗೋಡೆಗಳು ಕಿತ್ತು ಬರುತ್ತಿದ್ದು, ದೊಡ್ಡ ದೊಡ್ಡ ಬಿರುಕುಗಳು ಕಾಣಿಸಿಕೊಂಡಿವೆ. ಕಣ್ಣೀರಲ್ಲಿ ಕುಟುಂಬ :ಅವೈಜ್ಞಾನಿಕ ಕಾಮಗಾರಿಯಿಂದ ಬಡ ಕುಟುಂಬದ ಮನೆ ವಾಸಕ್ಕೆ ಯೋಗ್ಯವಿಲ್ಲದಂತಾಗಿದ್ದು, ಮನೆ ಯಾವಾಗ ಕುಸಿದು ಬೀಳುತ್ತದೋ ಎಂಬ ಭಯದಲ್ಲಿ ಕುಟುಂಬ ಕಣ್ಣೀರಲ್ಲಿ ಕಾಲ ಕಳೆಯುವಂತಾಗಿದೆ.ಈ ಕು–ರಿತು ಸಂಬಂಧಪಟ್ಟ ಇಲಾಖೆ ಅಧಿಕಾ–ರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ನಿವಾಸಿಗಳು ದೂರಿದ್ದಾರೆ.ಗ್ರಾಮಸ್ಥರ ಆಗ್ರಹ:ಕೂಡಲೇ ಜಿಲ್ಲಾಡಳಿತ ಹಾಗೂ ಪುರಸಭೆ ಅಧಿಕಾ–ರಿಗಳು ಸ್ಥಳಕ್ಕೆ ಭೇಟಿ ನೀಡಿ ಬಿರುಕು ಬಿಟ್ಟ ಮನೆಗಳನ್ನು ಪರಿಶೀಲಿಸಬೇಕು. ಸಂತ್ರಸ್ತ ಕುಟುಂಬಕ್ಕೆ ಸೂಕ್ತ ಪರಿಹಾರ ಹಾಗೂ ಮನೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಮತ್ತು ಕಾಮಗಾರಿ ವೈಫಲ್ಯಕ್ಕೆ ಕಾರಣ–ರಾದ ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಕರಡಕಲ್ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಭಿಕ್ಷಂ' ಸಿನಿಮಾದ ಪೋಸ್ಟರ್ ಬಿಡುಗಡೆ ಮಾಡಿದ ಲವ್ಲಿಸ್ಟಾರ್ ಪ್ರೇಮ್

❑ ನೈಜ್ಯ ದೆಸೆ ನ್ಯೂಸ್

ರಾಯಚೂರು : ಎಡೆದೊರೆ ಮೂವೀಸ್ ಅರ್ಪಿಸುವ 'ಭಿಕ್ಷಂ' ಕನ್ನಡ ಚಲನಚಿತ್ರದ ಪೋಸ್ಟರ್ ಬಿಡುಗಡೆಯನ್ನು ಲವ್ಲಿಸ್ಟಾರ್ ಪ್ರೇಮ್ ಬಿಡುಗಡೆ ಮಾಡಿ ಚಿತ್ರ ತಂಡಕ್ಕೆ ಶುಭ ಕೋರಿದರು.ಪ್ರಸ್ತುತ ದಿನಮಾನದ ಜನರು ಎದುರಿಸುತ್ತಿರುವ ಸಾಮಾಜಿ–ಕ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ರೂಪುತಾಳಿದ ಈ ಚಿತ್ರ, ರಾಯಚೂರು ಜಿಲ್ಲೆಯ ನೆಲ, ಜನಜೀವನ ಹಾಗೂ ಸ್ಥಳೀಯ ಪ್ರತಿಭೆಗಳಿಗೆ ಆದ್ಯತೆ ನೀಡಿದೆ. ರಾಯಚೂರು ಮತ್ತು ಬೆಂಗಳೂ–ರಿನ ಸುಂದರ ಸ್ಥಳಗಳಲ್ಲಿ ಚಿತ್ರೀಕರಣ ಮಾಡಲಾಗಿದೆ. ಈ 'ಭಿಕ್ಷಂ' ಚಿತ್ರಕ್ಕೆ ಪ್ರೇಕ್ಷಕರು ಪ್ರೋತ್ಸಾಹ ನೀಡಬೇಕು. ಇದೊಂದು ನೈಜ ಘಟನೆಯ ಹಿನ್ನೆಲೆಯನ್ನು ಒಳಗೊಂಡ ಸಿನಿಮಾವಾಗಿದೆ ಎಂದು ನಿರ್ದೇಶಕ ವಂಶಿ ಹೇಳಿದರು.ತಾರಾಗಣದಲ್ಲಿ ತಿರುಪತಿ ಜೋಷಿ ಶಿರಗುಂಪಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ನಾಯಕನಾಗಿ ಲಕ್ಷ್ಮಣ್ ಗಾರಲದಿನ್ನಿ , ನಾಯಕಿಯರಾಗಿ ಗೀತಾ ಶಿವಮೊಗ್ಗ ಮತ್ತು ಶ್ರೀಗೌರಿಯೂ ಬಣ್ಣ



ಹಚ್ಚಿದ್ದಾರೆ. ಉಳಿದಂತೆ ಪತ್ರಕರ್ತ ಅಣ್ಣಪ್ಪ ಮೇಟಿಗೌಡ, ನಾರಾಯಣ ದೇಸಾಯಿ, ಬಸವರಾಜ ಮಿಮಿಕ್ರಿ, ಸ್ವಾಮಿರಾವ್ ದೇಶಪಾಂಡೆ ಜಾರ್ಜ್, ನಾಗವೇಣಿ, ಪರಿಮಳ ಕುಲಕರ್ಣಿ, ಜ್ಯೋತಿ ಕೆ, ಸುಮಾ ಮಲ್ಕಾಪೂರ್ ,ವೀರೇಶ ದೇವನಪಲ್ಲಿ, ಗುರುಲಿಂಗಪ್ಪ, ನಾಗರಾಜ ಬಳಗೇರಾ, ಸುದರ್ಶನ ಗಧಾರ, ವೀರೇಶ ಕುಂಬಾರ ಯರಗೇರಾ, ರಘು ಕೊತ್ತದೊಡ್ಡಿ, ನರಸಿಂಹ ಇಡಪನೂರು, ಪ್ರವೀಣ ಬಳಗೇರಾ, ಪ್ರಸಾದ್ ಬಳಗೇರಾ, ಗೋರಪ್ಪ ಇಡಪನೂರು, ಪ್ರೇಮ ಕಟ್ಟಿಮನಿ, ಆಂಜಿನೇಯ ಮಲ್ದಕಲ್, ರಾಮ್ ರಾಜೋಳಿ ಮೊದಲಾದವರಿದ್ದಾರೆ ಛಾಯಾಗ್ರಹಣ ಫಣಿ ,ಅಭಿನವ್ ಮಂಡ್ಯ, ಮನು ನಿರ್ವಹಿಸಿದ್ದು, ಚಿತ್ರದಲ್ಲಿ ಎರಡು ಹಾಡುಗಳಿದ್ದು, ಸಂಗೀತ ಕಟ್ಟಿ ರಾಗ ಸಂಂ–ಯೋಜಿಸಿದ್ದಾರೆ. ಸಂಕಲನ ಮುತ್ತುರಾಜು ಟಿ, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಅವರದಿದೆ. ಜಾರ್ಜ, ಪ್ರಸಾದ್, ಗೋರಪ್ಪ, ನಾಗರಾಜ, ರಾಮ್, ಪ್ರೇಮ್ ಕಟ್ಟಿಮನೆ, ಜಗನ್ನಾಥ್, ಶ್ರೀಧರ್ ನಿರ್ದೇಶನ ಟೀಮ್‌ನಲ್ಲಿದ್ದು, ಸಹ ನಿರ್ದೇಶನ ಪತ್ರಕರ್ತ ಅಣ್ಣಪ್ಪ ಮೇಟಿಗೌಡ ನಿರ್ವಹಿಸಿದ್ದು,ಸಾಹಿತ್ಯ, ಸಂಭಾಷಣೆ, ಕಥೆ–ಚಿತ್ರಕಥೆ, ನಿರ್ದೇಶನ ಜೊತೆಗೆ ನಿರ್ಮಾಣದ ಜವಾಬ್ದಾರಿಯನ್ನು ವಂಶಿ ಎಡೆದೊರೆ ಹೊತ್ತಿದ್ದಾರೆ. ಇದೇ ಡಿಸೆಂಬರ್‌ದಲ್ಲಿ ರಾಜ್ಯಾದ್ಯಾಂತ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವದಾಗಿ ವಂಶಿ ಹೇಳಿದ್ದಾರೆ.

ವಚನ ದರ್ಶನ

ಎನ್ನ ಕಾಯವ ದಂಡಿಗೆಯ ಮಾಡಯ್ಯಾ ಎನ್ನ ಶಿರವ ಸೋರೆಯ ಮಾಡಯ್ಯಾ ಎನ್ನ ನರವ ತಂತಿಯ ಮಾಡಯ್ಯಾ, ಎನ್ನ ಬೆರಳ ಕಡ್ಡಿಯ ಮಾಡಯ್ಯಾ ಬತ್ತೀಸ ರಾಗವ ಹಾಡಯ್ಯಾ, ಉರದಲೊತ್ತಿ ಬಾರಿಸು,ಕೂಡಲಸಂಗಮದೇವಾ

12 ನೇ ಶತಮಾನದ ಶರಣರಾದ ವಿಶ್ವಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧವಾದ ಹಾಗೂ ಸುಂದರವಾದ ವಚನವಾಗಿದೆ. ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ತಮ್ಮ ಸಂಪೂರ್ಣ ದೇಹವನ್ನು ದೇವರ ಸೇವೆಗೆ ಅರ್ಪಿಸಿಕೊಳ್ಳುವಂತೆ ಮತ್ತು ದೇವನೇ ಅದನ್ನು ನುಡಿಸುವಂತೆ ಬೇಡಿಕೊಂಡಿದ್ದಾರೆ.ಈ ವಚನದಲ್ಲಿ ಬಸವಣ್ಣನವರು ತಮ್ಮನ್ನು ತಾವು ದೇವರ ಕೈಯಲ್ಲಿರುವ 'ದಂಡಿಗೆ' ಇಂದಿನ ವೀಣೆಯಂತಹ ಒಂದು ತಂತಿ ವಾದ್ಯ ಮಾಡಲು ಕೇಳಿಕೊಳ್ಳುತ್ತಿದ್ದಾರೆ.ದೇಹ ಮತ್ತು ಶಿರ ನನ್ನ ದೇಹವನ್ನು ವಾದ್ಯದ ದಂಡವನ್ನಾಗಿಯೂ, ನನ್ನ ತಲೆಯನ್ನು ವಾದ್ಯಕ್ಕೆ ಬಳಸುವ ಒಣಗಿದ ಸೋರೆಕಾಯಿಯ ಬುರುಡೆಯನ್ನಾಗಿಯೂ ಮಾಡು.ನರ ಮತ್ತು ಬೆರಳು: ನನ್ನ ದೇಹದ ನರಗಳನ್ನು ಆ ವಾದ್ಯದ ತಂತಿಗಳನ್ನಾಗಿ ಮಾಡು ಮತ್ತು ನನ್ನ ಬೆರಳುಗಳನ್ನೇ ಅದನ್ನು ನುಡಿಸುವ ಕಡ್ಡಿಯನ್ನಾಗಿ ಪರಿವರ್ತಿಸು.ಸಂಗೀತದ ನಾದ: ಹೇ ಕೂಡಲಸಂಗಮದೇವ, ನನ್ನನ್ನು ನಿನ್ನ ಎದೆಗೆ ಒತ್ತಿ ಹಿಡಿದು, ನಿನಗೆ ಇಷ್ಟ ಬಂದಂತೆ ಮೂವತ್ತೆರಡು ಬತ್ತೀಸ ರಾಗಗಳನ್ನು ಮಂಜುಳವಾಗಿ ನುಡಿಸು. ನನ್ನ ಜೀವನದ ಪ್ರತಿ ಕ್ಷಣವೂ ನಿನ್ನ ನಾದಮಯವಾಗಿರಲಿ ಎಂಬುದು ಇದರ ಆಶಯವಾಗಿದೆ.ಅಂದರೆ, "ನನ್ನಲ್ಲಿ ಯಾವುದೇ ಅಹಂಕಾರ ಉಳಿಯಬಾರದು, ನಾನು ಸಂಪೂರ್ಣವಾಗಿ ನಿನ್ನ ಇಚ್ಛೆಯಂತೆ ನಡೆಯುವ ನಿಮಿತ್ತ ಮಾತ್ರನಾಗಬೇಕು" ಎಂಬ ಪರಮ ಭಕ್ತಿಯ ಶರಣಾಗತಿಯ ಭಾವ ಇಲ್ಲಿದೆ. ಇಂಥಹ ವಚನಗಳು ಮನುಕುಲಕ್ಕೆ ದಾರಿದೀಪವಾಗಿವೆ. ನಾವು ನೀವು ವಚನದ ದಾರಿಯಲ್ಲಿ ಸಾಗೋಣ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

ಕುಡಿಯುವ ನೀರಿಗಾಗಿ 9ನೇ ದಿನಕ್ಕೂ ಮುಂದುವರೆದ ಗೋಲದಿನ್ನಿ ಎಸ್ಕೇಪ್ ರೈತ ಧರಣಿ ,ಅಧಿಕಾರಿಗಳ ಮೌನಕ್ಕೆ ರೈತರ ಆಕ್ರೋಶ

ನೀರು ಬಿಡುವಲ್ಲಿ ಅಧಿಕಾರಿಗಳು ಸಂಪೂರ್ಣ ವೈಫಲ್ಯ : ಶಿವಶಂಕ್ರಯ್ಯ ಸ್ವಾಮಿ


❑ ನೈಜ್ಯ ದೆಸೆ ನ್ಯೂಸ್



ಮಾನ್ವಿ : ತಾಲೂಕಿನ ನಂದಿಹಾಳ ಗ್ರಾಮದಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಗೋಲದಿನ್ನಿ ಎಸ್ಕೇಪ್ ರೈತ ಹೋರಾಟ ಸಮಿತಿಯಿಂದ ಅನಿರ್ದಿಷ್ಟವಧಿ ಧರಣಿ ಸತ್ಯಾಗ್ರಹ 9 ನೇ ದಿನಕ್ಕೆ ಕಾಲಿಟ್ಟಿದ್ದು ಅಧಿಕಾರಿಗಳು ಮೌನಕ್ಕೆ ರೈತರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ವೇಳೆ ಭೋಗವತಿ ಗ್ರಾ.ಪಂ ಮಾಜಿ ಅಧ್ಯಕ್ಷ ರಾದ ಶಿವಶಂಕ್ರಯ್ಯ ಸ್ವಾಮಿ ಮಾತನಾಡಿ ತಾಲೂಕಿನ ಜಾನೇಕಲ್, ಅಮರಾವತಿ, ನಸ್ಲಾಪುರ, ನಂದಿಹಾಳ, ರಾಜಲದಿನ್ನಿ. ಯರಮಲದೊಡ್ಡಿ, ಮುಷ್ಟೂರು, ರಂಗದಾಳ, ಬುದ್ದಿನ್ನಿ ಗ್ರಾಮದ ಜನ-ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಗೊಲ್ಲದಿನ್ನಿ ಎಸ್ಕೆಪ್ ಮುಖಾಂತರ ನೀರು ಹರಿಸುವ ಸಲುವಾಗಿ ಕಳೆದ 9 ದಿನಗಳಿಂದ ನಿರಂತರ ಹೋರಾಟವನ್ನು ಶಾಂತಿ ರೀತಿಯಿಂದ ಅಂಬೇಡ್ಕರ್ ಅಶಯದಂತೆ ಮಾಡುತ್ತಿದ್ದು ಸರಕಾರಿ ಅಧಿಕಾರಿಗಳಿಗೆ ಗೌರವಯುತವಾಗಿ ಹೋರಾಟ ಮಾಡಲಾಗುತ್ತಿದೆ. ಅಧಿಕಾರಿಗಳ ಭರವಸೆ ಮೇರೆಗೆ ಯಾವುದೇ ರಸ್ತೆ ತಡೆ ಮಾಡದೇ ಶಾಂತಿಯುತವಾಗಿ ಹೋರಾಟ ಮಾಡಲಾಗುತ್ತಿದೆ. ಅದರೂ ಅಧಿಕಾರಿಗಳು ಬೇಟಿ ನೀಡಿದರೂ ಭರವಸೆ ನೀಡುತ್ತಾರೆ ಹೊರತು ಕುಡಿಯುವ ನೀರು ಬಿಡುತ್ತಿಲ್ಲ. ನಮ್ಮ ಬೇಡಿಕೆ ಈಡೇರುವವರೆಗೂ ಧರಣಿ ಹಿಂಪಡೆಯುವುದಿಲ್ಲ. ಅಧಿಕಾರಿಗಳು ಮೌನಕ್ಕೆ ಜಾರಿದ್ದಾರೆ. ಕೂಡಲೇ ಗೋಲದಿನ್ನಿ ಎಸ್ಕೇಪ್ ಕಾಲುವೆಯಿಂದ ನಂದಿಹಾಳ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂಬುದು ಹೋರಾಟಗಾರರ ಪ್ರಮುಖ ಬೇಡಿಕೆಯಾಗಿದೆ. ಬೇಸಿಗೆಯ ಬೇಗೆಯಲ್ಲಿ ನೀರಿಲ್ಲದೆ ಜನರು ಮತ್ತು ದನ-ಕರುಗಳು ಪರದಾಡುತ್ತಿರುವುದರಿಂದ ತಕ್ಷಣ ನೀರು ಬಿಡುವ ಕೆಲಸ ಮಾಡಬೇಕು ಈ ಹೋರಾಟ ಧರಣೆ ಸತ್ಯಾಗ್ರಹಕ್ಕೆ ಆ.27 ರಂದು ಮಂಗಳವಾರ ಸಮಸ್ಯೆ ಅಲಿಸುವುದಾಗಿ ಆಧಿಕಾರಿಗಳು ಭರವಸೆ ನೀಡಿದ್ದಾರೆ. ಕಾದು ನೋಡಬೇಕಾಗಿದೆ ಇಲ್ಲವಾದಲ್ಲಿ ರಾಜ್ಯ ಹೆದ್ದಾರಿ ಬಂದ್ ಮಾಡಿ ಹೋರಾಟ ಮಾಡಲಾಗುವುದು ಎಚ್ಚರಿಕೆ ನೀಡಿದರು.ಈ ಸಂದರ್ಭದಲ್ಲಿ ರಾಮನಗೌಡ ನಂದಿಹಾಳ, ಅಮರೇಶಗೌಡ ಪೋಲಿಸ್ ಪಾಟೀಲ್ ನಂದಿಹಾಳ, ಶಿವಕುಮಾರಗೌಡ ಅಮರಾವತಿ, ರಾಮ ರಾಮಕೃಷ್ಣ ಅಮರಾವತಿ, ಶರಣಪ್ಪ ನಂದಿಹಾಳ,, ಶಿವಶಂಕರಗೌಡ ಅಮರಾವತಿ, ಈರಯ್ಯ ಪೂಜಾರಿ ರಾಜಲದಿನ್ನಿ, ಹನುಮಂತಗೌಡ ಮುಸ್ಟೂರು, ಗಡಿಲಿಂಗಪ್ಪ ಬುದಿನ್ನಿ, ಮಲ್ಲೇಶ ಮೂಸ್ಟೂರು, ಶರಣಬಸವ ನಸಲಾಪೂರು ಇದ್ದರು.

ಆದಿಕವಿ ವಾಲ್ಮೀಕಿ ಮಹರ್ಷಿ ಜೀವನ ಸಂದೇಶ –ಬಾಲಪ್ಪ ನಾಯಕ

❑ ನೈಜ್ಯ ದೆಸೆ ನ್ಯೂಸ್





ಬಾಲಪ್ಪ ನಾಯಕ
ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ
ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ

ವಾಲ್ಮೀಕಿ ಅವರ ಜೀವನ ಪರಿಚಯ ಹಿಂದೂ ಧಾರ್ಮಿಕ ಪರಂಪರೆಯ ಪ್ರಕಾರ, ವಾಲ್ಮೀಕಿ ಅವರ ಆರಂಭಿಕ ಹೆಸರು ರತ್ನಾಕರ ಎಂದು ಹೇಳಲಾಗುತ್ತದೆ. ಅವರ ಜೀವನದ ಆರಂಭದ ಕುರಿತು ವಿವಿಧ ಕಥೆಗಳು ಪ್ರಚಲಿತದಲ್ಲಿವೆ. ಒಂದು ಪ್ರಸಿದ್ಧ ಕಥೆಯ ಪ್ರಕಾರ, ಅವರು ಜೀವನೋಪಾಯಕ್ಕಾಗಿ ದರೋಡೆ ಮಾಡುತ್ತಿದ್ದ ವ್ಯಕ್ತಿಯಾಗಿದ್ದರು. ಒಂದು ದಿನ ನಾರದ ಮಹರ್ಷಿಗಳು ಅವರನ್ನು ಭೇಟಿಯಾಗಿ, ತಮ್ಮ ತಪ್ಪುಗಳ ಪರಿಣಾಮವನ್ನು ಕುಟುಂಬದವರು ಹಂಚಿಕೊಳ್ಳುತ್ತಾರೆಯೇ ಎಂದು ಪ್ರಶ್ನಿಸಿದರು.ಈ ಪ್ರಶ್ನೆಯಿಂದ ಆತ್ಮಾವಲೋಕನಕ್ಕೆ ಒಳಗಾದ ರತ್ನಾಕರರು ತಮ್ಮ ಜೀವನವನ್ನು ಬದಲಿಸಿಕೊಳ್ಳಲು ನಿರ್ಧರಿಸಿದರು. ನಾರದ ಮಹರ್ಷಿಗಳ ಮಾರ್ಗದರ್ಶನದಲ್ಲಿ ತಪಸ್ಸು ಮತ್ತು ಧ್ಯಾನದಲ್ಲಿ ತೊಡಗಿದರು ಎಂಬುದು ಧಾರ್ಮಿಕ ಕಥನವಾಗಿದೆ. ದೀರ್ಘಕಾಲದ ತಪಸ್ಸಿನ ಸಂದರ್ಭದಲ್ಲಿ ಅವರ ಸುತ್ತ ಹುತ್ತ ಬೆಳೆದಿದ್ದರಿಂದ, ಅವರಿಗೆ ವಾಲ್ಮೀಕಿ ಎಂಬ ಹೆಸರು ಬಂದಿತು ಎಂದು ನಂಬಲಾಗುತ್ತದೆ ಹಿಂದೂ ಧರ್ಮದಲ್ಲಿ ಅತ್ಯಂತ ಪವಿತ್ರವಾದ ಶ್ಲೋಕವೆಂದರೆ. ಮಹರ್ಷಿ ವಾಲ್ಮೀಕಿ ಶ್ಲೋಕ ಅಥವಾ ಗುರುವನ್ನು ಸ್ಮರಿಸುವ ಗುರು ಶ್ಲೋಕ.ರಾಮಾಯಣ ಮಹಾಕಾವ್ಯವನ್ನು ರಚಿಸಿದ ಆದಿಕವಿ ಮಹರ್ಷಿ ವಾಲ್ಮೀಕಿಯವರನ್ನು ಸ್ಮರಿಸುವ ಶ್ಲೋಕ ಇದು:ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಮ್ ▯ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಮ್ ▯ಗುರುವನ್ನು ಸ್ಮರಿಸಲು ಬಳಸುವ ಅತ್ಯಂತ ಜನಪ್ರಿಯ ಶ್ಲೋಕ:ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ▯ಆದಿಕವಿ ಎಂಬ ಬಿರುದು ಹೇಗೆ ಬಂತು ಪರಂಪರೆಯ ಕಥೆಯ ಪ್ರಕಾರ, ಒಂದು ದಿನ ವಾಲ್ಮೀಕಿ ಮಹರ್ಷಿಗಳು ತಮಸಾ ನದಿಯ ತೀರದಲ್ಲಿ ಸಂಚರಿಸುತ್ತಿದ್ದಾಗ, ಬೇಟೆಗಾರನೊಬ್ಬ ಕ್ರೌಂಚ ಪಕ್ಷಿಯನ್ನು ಕೊಲ್ಲುವುದನ್ನು ಕಂಡರು. ಇದರಿಂದ ದುಃಖಿತರಾದ ಅವರು ಬೇಟೆಗಾರನನ್ನು ಉದ್ದೇಶಿಸಿ ಛಂದೋಬದ್ಧವಾದ ಶ್ಲೋಕವನ್ನು ನುಡಿದರು.ಈ ಘಟನೆಯಿಂದ ಶ್ಲೋಕ ರೂಪದ ಕಾವ್ಯಕ್ಕೆ ಪ್ರೇರಣೆ ದೊರೆಯಿತು ಎಂದು ಹೇಳಲಾಗುತ್ತದೆ. ಆದ್ದರಿಂದ ವಾಲ್ಮೀಕಿ ಅವರನ್ನು ಆದಿಕವಿ ▯ ಮೊದಲ ಕವಿ ಎಂದು ಗೌರವಿಸಲಾಗುತ್ತದೆ.ವಾಲ್ಮೀಕಿ ತನ್ನ ದೈನಂದಿನ ಶುದ್ದೀಕರಣಕ್ಕಾಗಿ ಗಂಗಾ ನದಿಗೆ ಹೋಗುತ್ತಿದ್ದನು. ಭಾರದ್ವಾಜ ಎಂಬ ಶಿಷ್ಯನು ತನ್ನ ಬಟ್ಟೆಗಳನ್ನು ಹೊತ್ತುಕೊಂಡು ಹೋಗುತ್ತಿದ್ದನು. ದಾರಿಯಲ್ಲಿ, ಅವರು ತಮಸ ಹೊಳೆಯನ್ನು ಕಂಡರು. ಹೊಳೆಯನ್ನು ನೋಡುತ್ತಾ, ವಾಲ್ಮೀಕಿ ತನ್ನ ಶಿಷ್ಯನಿಗೆ, "ನೋಡು, ಈ ನೀರು ಎಷ್ಟು ಸ್ಪಷ್ಟವಾಗಿದೆ, ಒಳ್ಳೆಯ ಮನುಷ್ಯನ ಮನಸ್ಸಿನಂತೆ! ನಾನು ಇಂದು ಇಲ್ಲಿ ಸ್ನಾನ ಮಾಡುತ್ತೇನೆ" ಎಂದು ಹೇಳಿದನು. ಹೊಳೆಯಲ್ಲಿ ಹೆಜ್ಜೆ ಹಾಕಲು ಸೂಕ್ತವಾದ ಸ್ಥಳವನ್ನು ಹುಡುಕುತ್ತಿದ್ದಾಗ, ಅವನು ಒಂದು ಕ್ರೇನ್ ಜೋಡಿಯನ್ನು ಕಂಡನು. ಸಂತೋಷದ ಪಕ್ಷಿಗಳನ್ನು ನೋಡಿ ವಾಲ್ಮೀಕಿ ತುಂಬಾ ಸಂತೋಷಪಟ್ಟನು. ಇದ್ದಕ್ಕಿದ್ದಂತೆ, ಬಾಣದಿಂದ ಹೊಡೆದು, ಗಂಡು ಹಕ್ಕಿ ಸ್ಥಳದಲ್ಲೇ ಸತ್ತುಹೋಯಿತು. ದುಃಖದಿಂದ ತುಂಬಿದ ತನ್ನ ಸಂಗಾತಿಯು ದುಃಖದಿಂದ ಕಿರುಚುತ್ತಾ ಆಘಾತದಿಂದ ಸತ್ತಿತು. ಈ ದಯನೀಯ ದೃಶ್ಯವನ್ನು ನೋಡಿ ವಾಲ್ಮೀಕಿಯ ಹೃದಯ ಕರಗಿತು. ಪಕ್ಷಿಯನ್ನು ಹೊಡೆದವರು ಯಾರು ಎಂದು ಕಂಡುಹಿಡಿಯಲು ಅವನು ಸುತ್ತಲೂ ನೋಡಿದನು. ಬಿಲ್ಲು ಮತ್ತು ಬಾಣಗಳನ್ನು ಹಿಡಿದ ಬೇಟೆಗಾರನನ್ನು ಅವನು ಹತ್ತಿರದಲ್ಲಿ ನೋಡಿದನು. ವಾಲ್ಮೀಕಿ ತುಂಬಾ ಕೋಪಗೊಂಡನು. ಅವನ ತುಟಿಗಳು ತೆರೆದು ಕೂಗಿದನು,ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ಮಾ ನಿಷಾದ ಪ್ರತಿಷ್ಠಾ ತ್ವಮಗಮಃ ಶಾಶ್ವತಃ ಸಮಃಯತ್ ಕ್ರೌಂಚಮಿಥುನಾದೇಕಮ್ ಅವಧಿಃ ಕಾಮಮೋಹಿತಮ್. ನೀವು ಶಾಶ್ವತವಾದ ಪ್ರೀತಿ ಮತ್ತು ಅನಾಹುತದ ದೀರ್ಘ ವರ್ಷಗಳ ಕಾಲ ವಿಶ್ರಾಂತಿಯನ್ನು ಕಾಣುವುದಿಲ್ಲ.ವಾಲ್ಮೀಕಿಂಯ ಕೋಪ ಮತ್ತು ದುಃಖದಿಂದ ಸ್ವಯಂಪ್ರೇರಿತವಾಗಿ ಹೊರಹೊಮ್ಮಿದ ಈ ದ್ವಿಪದಿಯನ್ನು ಸಂಸ್ಕೃತ ಸಾಹಿತ್ಯದ ಮೊದಲ ಶ್ಲೋಕವೆಂದು ಪರಿಗಣಿಸಲಾಗಿದೆ . ನಂತರ ವಾಲ್ಮೀಕಿ ಇಡೀ ರಾಮಾಯಣವನ್ನು ಅದೇ ಪ್ರಮಾಣದಲ್ಲಿ ರಚಿಸಿದರು. ವಾಲ್ಮೀಕಿಯನ್ನು ಆದಿ ಕವಿ (ಮೊದಲ ಕವಿ) ಎಂದು ಪೂಜಿಸಲಾಗುತ್ತದೆ; ರಾಮಾಯಣವನ್ನು ಮೊದಲ ಕಾವ್ಯ (ಪದ್ಯ) ಎಂದು ಪೂಜಿಸಲಾಗುತ್ತದೆ .ರಾಮಾಯಣದ ರಚನೆ ವಾಲ್ಮೀಕಿ ಮಹರ್ಷಿಗಳು ರಚಿಸಿದರೆಂದು ಪರಂಪರೆಯಿಂದ ಗುರುತಿಸಲ್ಪಡುವ ರಾಮಾಯಣವು ಶ್ರೀರಾಮನ ಜೀವನ, ಸೀತೆ, ಲಕ್ಷ್ಮಣ, ಹನುಮಂತ ಮತ್ತು ರಾವಣನ ಕಥೆಯನ್ನು ಒಳಗೊಂಡಿದೆ.ರಾಮಾಯಣದ ಸಾಂಪ್ರದಾಯಿಕ ವಿಭಾಗಗಳು ಏಳು ಕಾಂಡಗಳಾಗಿವೆ:ಬಾಲಕಾಂಡ ▯ ಶ್ರೀರಾಮನ ಬಾಲ್ಯ ಮತ್ತು ವಿವಾಹ. ಅಯೋಧ್ಯಾಕಾಂಡ ▯ ರಾಮನ ವನವಾಸದ ಪ್ರಸಂಗ.ಅರಣ್ಯಕಾಂಡ ▯ ಅರಣ್ಯ ಜೀವನ ಮತ್ತು ಸೀತಾಪಹರಣ.ಕಿಷ್ಕಿಂಧಾಕಾಂಡ ▯ ಸುಗ್ರೀವನೊಂದಿಗೆ ಸ್ನೇಹ ಮತ್ತು ವಾನರರ ಸಹಾಯ.ಸುಂದರಕಾಂಡ ▯ ಹನುಮಂತನ ಲಂಕಾ ಪ್ರಯಾಣ.ಯುದ್ಧಕಾಂಡ ▯ ರಾಮ-ರಾವಣರ ಯುದ್ಧ ಮತ್ತು ಸೀತೆಯ ಬಿಡುಗಡೆ.ಉತ್ತರಕಾಂಡ ▯ ರಾಮನಮುಂದಿನ ಜೀವನಕ್ಕೆ ಸಂಬಂಧಿಸಿದ ಕಥನಗಳು.ಪಾರಂಪರಿಕವಾಗಿ ರಾಮಾಯಣವನ್ನು ಸುಮಾರು 24,000 ಶ್ಲೋಕಗಳನ್ನು ಒಳಗೊಂಡಮಹಾಕಾವ್ಯವೆಂದು ವಿವರಿಸಲಾಗುತ್ತದೆ. ಸೀತೆ ಮತ್ತು ಲವ-ಕುಶರೊಂದಿಗೆ ವಾಲ್ಮೀಕಿ ಅವರ ಸಂಬಂಧ ರಾಮಾಯಣದ ಕಥೆಯ ಪ್ರಕಾರ, ಸೀತೆ ಅರಣ್ಯದಲ್ಲಿ ವಾಲ್ಮೀಕಿ ಮಹರ್ಷಿಗಳ ಆಶ್ರಮದಲ್ಲಿ ಆಶ್ರಯ ಪಡೆದರು. ಅಲ್ಲಿ ಲವ ಮತ್ತು ಕುಶ ಎಂಬ ಅವಳಿ ಮಕ್ಕಳನ್ನು ಬೆಳೆಸಿದರು. ವಾಲ್ಮೀಕಿ ಮಹರ್ಷಿಗಳು ಅವರಿಗೆ ಶಿಕ್ಷಣ ನೀಡಿ, ರಾಮಾಯಣದ ಕಥೆಯನ್ನು ಕಲಿಸಿದರು ಎಂದು ಹೇಳಲಾಗುತ್ತದೆ.ಈ ಕಥೆಯು ಮಕ್ಕಳ ಶಿಕ್ಷಣ, ಗುರು-ಶಿಷ್ಯರ ಸಂಬಂಧ ಮತ್ತು ಆಶ್ರಯ ನೀಡುವ ಮಹತ್ವವನ್ನು ಸಾರುತ್ತದೆ. ವಾಲ್ಮೀಕಿ ಜಯಂತಿಯ ಮಹತ್ವಮಹರ್ಷಿ ವಾಲ್ಮೀಕಿ ಅವರ ಜನ್ಮಸ್ಮರಣಾರ್ಥವಾಗಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಅವರ ಜೀವನ, ಸಾಹಿತ್ಯ ಸೇವೆ ಮತ್ತು ಆದರ್ಶಗಳನ್ನು ಸ್ಮರಿಸಲಾಗುತ್ತದೆ.ಈ ದಿನದ ಪ್ರಮುಖ ಸಂದೇಶಗಳು:ಜ್ಞಾನ ಮತ್ತು ಶಿಕ್ಷಣಕ್ಕೆ ಗೌರವ ನೀಡುವುದು.ಸತ್ಯ, ಧರ್ಮ ಮತ್ತು ನ್ಯಾಯದ ಮಾರ್ಗದಲ್ಲಿ ನಡೆಯುವುದು. ತಪ್ಪುಗಳಿಂದ ಪಾಠ ಕಲಿತು ಉತ್ತಮ ಜೀವನ ನಡೆಸುವುದು.ಸಮಾಜದಲ್ಲಿ ಸಮಾನತೆ, ಮಾನವೀಯತೆ ಮತ್ತು ಸಹೋದರತ್ವವನ್ನು ಬೆಳೆಸುವುದು.ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು. ಮಹರ್ಷಿ ವಾಲ್ಮೀಕಿ ಅವರ ಜೀವನದಿಂದ ನಾವು ಕಲಿಯಬೇಕಾದ ಪಾಠ ಮಹರ್ಷಿ ವಾಲ್ಮೀಕಿ ಅವರ ಜೀವನದ ಕುರಿತು ಪ್ರಚಲಿತದಲ್ಲಿರುವ ಕಥೆಗಳು, ಮನುಷ್ಯನು ತನ್ನ ಜೀವನವನ್ನು ಸುಧಾರಿಸಿಕೊಳ್ಳಬಹುದು ಎಂಬ ಸಂದೇಶವನ್ನು ನೀಡುತ್ತವೆ. ಜ್ಞಾನ, ತಪಸ್ಸು, ಪರಿಶ್ರಮ ಮತ್ತು ಸತ್ಕಾರ್ಯಗಳ ಮೂಲಕ ಸಮಾಜಕ್ಕೆ ಮಹತ್ವದ ಕೊಡುಗೆ ನೀಡಬಹುದು ಎಂಬುದನ್ನು ಅವರ ಪರಂಪರೆ ನೆನಪಿಸುತ್ತದೆ.ಸಾರಾಂಶ: ಮಹರ್ಷಿ ವಾಲ್ಮೀಕಿ ಅವರು ಕೇವಲ ರಾಮಾಯಣದ ಕರ್ತೃ ಎಂದು ಗೌರವಿಸಲ್ಪಡುವವರಲ್ಲ; ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದ ವ್ಯಕ್ತಿ. ಅವರ ಹೆಸರಿನೊಂದಿಗೆ ಗುರುತಿಸಲ್ಪಡುವ ಆದರ್ಶಗಳು ಇಂದಿಗೂ ಜನರಿಗೆ ಸ್ಫೂರ್ತಿಯಾಗಿವೆ.

ಅಂಭಾದೇವಿ ಮೂರ್ತಿ ಮೆರವಣಿಗೆ

❑ ನೈಜ್ಯ ದೆಸೆ ನ್ಯೂಸ್



ಕವಿತಾಳ ಪಟ್ಟಣ ಸಮೀಪದ ಹುಸೇನಪೂರ ಗ್ರಾಮದ ಆರಾಧ್ಯದೈವ ಶ್ರೀ ಅಂಭಾದೇವಿ ಮೂರ್ತಿ ಮೆರವಣಿಗೆಯೂ ಅತ್ಯಂತ ಸಭ್ರಮ ಸಡಗರದಿಂದ ಅದ್ದೂರಿಯಾಗಿ ಜರುಗಿತು. ನವರಾತ್ರಿ ಪ್ರಯುಕ್ತ 9 ದಿನಗಳ ಕಾಲ ಗ್ರಾಮದ ಧೆವರ ಮನೆಯಲ್ಲಿನ ಮೂರ್ತಿಯನ್ನು ಕಲ್ಯಾಣ ಪಂಟಪದಲ್ಲಿ ಪ್ರತಿಷ್ಠಾಪಿಸಿ ಪುರಾಣ ಪ್ರವಚನ ಕಾರ್ಯಕ್ರಮವನ್ನು ಹಮ್ಮಿಕೊಂಡು ದಸರಾ ನಂತರ ದೇವಿಯ ಮೂರ್ತಿಯನ್ನು ಪುನಃ ದೇವರ ಮನೆಗೆ ಕರೆದುಕೊಂಡು ಹೋಗುವಾಗ ಪುರವಂತಿಕೆ ಸೇವೆ ಹಾಗೂ ಭಾಜಾ ಭಜಂತ್ರಿಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡಲಾಯಿತು, ಈ ಸಂದರ್ಭದಲ್ಲಿ ಗ್ರಾಮದ ಮತ್ತು ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಸಂಭ್ರಮ ಸಡಗರದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.



ಶೀಘ್ರದಲ್ಲೇ ರಾಜ್ಯದ ಗುತ್ತಿಗೆ ವೈದ್ಯರ ಸೇವೆ ಖಾಯಂ: ಸಚಿವ ಯು.ಟಿ. ಖಾದರ್

❑ ನೈಜ್ಯ ದೆಸೆ ನ್ಯೂಸ್



ಬೆಂಗಳೂರು: ಕರ್ನಾಟಕ ರಾಜ್ಯದ ಸರ್ಕಾರಿ ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರಿಗೆ ರಾಜ್ಯ ಸರ್ಕಾರದಿಂದ ಸಿಹಿ ಸುದ್ದಿ ದೊರೆಯುವ ನಿರೀಕ್ಷೆಯಿದೆ. ಐದು ವರ್ಷಗಳ ಕಾಲ ಉತ್ತಮ ಸೇವೆ ಸಲ್ಲಿಸಿದ ಗುತ್ತಿಗೆ ವೈದ್ಯರನ್ನು ಕಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದ್ದು, ಈ ನಿಟ್ಟಿನಲ್ಲಿ ಶೀಘ್ರದಲ್ಲೇ ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದ್ದಾರೆ.ರಾಜ್ಯದಲ್ಲಿ ವೈದ್ಯರ ಕೊರತೆಯನ್ನು ನೀಗಿಸುವುದು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಯನ್ನು ಬಲಪಡಿಸುವ ಉದ್ದೇಶದಿಂದ ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ. ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯರು ಮೂರು ವರ್ಷಗಳ ಕಾಲ ಉತ್ತಮವಾಗಿ ಕಾರ್ಯನಿರ್ವಹಿಸಿದರೆ, ಅವರ ಸೇವೆಯನ್ನು ಕಾಯಂಗೊಳಿಸುವ ಕುರಿತು ಪ್ರಸ್ತಾವನೆ ರೂಪಿಸಲಾಗಿದೆ. ಈ ಪ್ರಕ್ರಿಯೆಗೆ ಸರ್ಕಾರದ ಅನುಮೋದನೆ ಅಗತ್ಯವಿದೆ.ವೈದ್ಯರ ಕೊರತೆ ನೀಗಿಸಲು ಕ್ರಮ:ರಾಜ್ಯದಲ್ಲಿ ವೈದ್ಯಕೀಯ ಸಿಬ್ಬಂದಿಯ ಕೊರತೆಯನ್ನು ನಿವಾರಿಸಲು ನೇರ ನೇಮಕಾತಿ ಹಾಗೂ ಗುತ್ತಿಗೆ ಆಧಾರದ ನೇಮಕಾತಿಗೆ ಸರ್ಕಾರ ಒತ್ತು ನೀಡುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರ ಲಭ್ಯತೆಯನ್ನು ಹೆಚ್ಚಿಸುವುದು ಸರ್ಕಾರದ ಪ್ರಮುಖ ಉದ್ದೇಶವಾಗಿದೆ.ಗುತ್ತಿಗೆ ವೈದ್ಯರಿಗೆ ಉದ್ಯೋಗ ಭದ್ರತೆ ಕಲ್ಪಿಸುವುದರಿಂದ ಗ್ರಾಮೀಣ ಭಾಗಗಳಲ್ಲಿ ವೈದ್ಯಕೀಯ ಸೇವೆ ಸಲ್ಲಿಸಲು ಹೆಚ್ಚಿನ ವೈದ್ಯರು ಮುಂದೆ ಬರಬಹುದು ಎಂಬ ನಿರೀಕ್ಷೆಯಿದೆ.ಗಮನಿಸಿ: ಗುತ್ತಿಗೆ ವೈದ್ಯರ ಸೇವೆ ಕಾಯಂಗೊಳಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಂತಿಮ ಸರ್ಕಾರಿ ಆದೇಶ ಹಾಗೂ ಅಧಿಕೃತ ಮಾರ್ಗಸೂಚಿಗಳು ಪ್ರಕಟವಾದ ಬಳಿಕವೇ ಖಾಯಂ ನೇಮಕಾತಿಯ ಷರತ್ತುಗಳು ಮತ್ತು ಜಾರಿಗೆ ಬರುವ ದಿನಾಂಕದ ಕುರಿತು ಸ್ಪಷ್ಟತೆ ದೊರೆಯಲಿದೆ.

ಶ್ರೀ ಮಾಯಮ್ಮದೇವಿ ದೇವಸ್ಥಾನಕ್ಕೆ ಶಾಸಕ ನಾಡಗೌಡ ಭೇಟಿ

❑ ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಸಮೀಪದ ಮಿಣಜಗಿ ಗ್ರಾಮದ ಶ್ರೀ ಮಾಯಮ್ಮದೇವಿ ದೇವಸ್ಥಾನಕ್ಕೆ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಸಿ.ಎಸ್. ನಾಡಗೌಡ(ಅಪ್ಪಾಜಿ) ಅವರು ಮಂಗಳವಾರ ಭೇಟಿ ನೀಡಿ ದೇವರ ದರ್ಶನ ಪಡೆದುಕೊಂಡು ನಂತರ ಗ್ರಾಮಸ್ಥರೊಂದಿಗೆ ಬನ್ನಿ ವಿನಿಮಯ ಮಾಡಿಕೊಂಡರು.ಈ ಸಂದರ್ಭದಲ್ಲಿ ಅವರು ಮಾತನಾಡಿ ಶ್ರೇಷ್ಠ ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿರುವ ಶ್ರೀ ಮಾಯಮ್ಮದೇವಿ ತಾಯಿಯ ದೇವಾಲಯಕ್ಕೆ ಪ್ರತಿ ವರ್ಷ ನಾನು ನವರಾತ್ರಿ ಉತ್ಸವದ ಸಂದರ್ಭದಲ್ಲಿ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಗ್ರಾಮಸ್ಥರೊಂದಿಗೆ ಬನ್ನಿ ವಿನಿಮಯ ಮಾಡಿಕೊಳ್ಳುತ್ತೇನೆ. ಇವತ್ತು ನಾನು ತಾಯಿ ಮಾಯಮ್ಮದೇವಿಯಲ್ಲಿ ನಮ್ಮ ರಾಜ್ಯ ಹಾಗೂ ಕ್ಷೇತ್ರದ ಎಲ್ಲ ಜನರ ಸುಖ ಶಾಂತಿ ಹಾಗೂ ಸಮೃದ್ಧಿಗಾಗಿ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸಿದ್ದೇನೆ ಎಂದರು. ಇದೇ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ವತಿಯಿಂದ ಶಾಸಕ ಅಪ್ಪಾಜಿ ನಾಡಗೌಡರಿಗೆ ಗೌರವ ಸಮರ್ಪಣೆ ಸಲ್ಲಿಸಲಾಯಿತು. ಈ ಸಮಯದಲ್ಲಿ ಗಣ್ಯರಾದ ವೀರೇಶಗೌಡ ಬಾಗೇವಾಡಿ, ಜೆ.ಡಿ. ಪಾಟೀಲ, ಬಿ.ಎಂ.ಬಿರಾದಾರ, ಎಂ ಎಸ್ ಮ್ಯಾಗೇರಿ, ಸಂಗನಗೌಡ ಪಾಟೀಲ, ಎ.ಎಂ.ಸರ್ಜಾಪೂರ, ಬಿ.ಜೆ.ಪೂಜಾರಿ, ಎಂ.ಜಿ.ಯರನಾಳ, ಎಚ್.ಎನ್. ಬಿರಾದಾರ, ಎಂ.ಎನ್.ಬಿರಾದಾರ, ಸಂಗಣ್ಣ ತೇಕೂರ, ಸಿದ್ದು ಜಂಬಗಿ, ಬಸವರಾಜ ಯರನಾಳ, ಬಿ.ಸಿ.ವಾಲಿಕಾರ, ಸೋಮು ನಾಯ್ಕೋಡಿ ಮತ್ತಿತರರು ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101